



ಕರ್ನಾಟಕ ಸರ್ಕಾರ

# ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

# ವಾರ್ಷಿಕ ವರದಿ 2009–2010

ಆಯುಕ್ತರ ಕಛೇರಿ:
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಅಂಕಿ–ಅಂಶ ವಿಭಾಗ,
ವಿಶ್ವೇಶ್ವರಯ್ಯ ಚಿಕ್ಕಗೋಪುರ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560 001

# ಪರಿಚಯ

ರಾಜ್ಯದ ಗ್ರಾಮೀಣ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ಜಾನುವಾರು ಮತ್ತು ಕುಕ್ಕುಟಗಳು. ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಜಾನುವಾರು ಮತ್ತು ಕುಕ್ಕುಟಗಳ ಆರೋಗ್ಯ ರಕ್ಷಣೆ, ಅಭಿವೃದ್ಧಿ, ಪಶು ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನ ಇವುಗಳು ಮೂಲಭೂತ ಕರ್ತವ್ಯವಾಗಿರುತ್ತದೆ. ಇದಲ್ಲದೇ ಇಲಾಖೆಯಸಹೋದರಿ ಸಂಸ್ಥೆಗಳಾದ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ, ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿ ನಿಯಮಿತ, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ದಿ ನಿಗಮ, ಕರ್ನಾಟಕ ಸಹಕಾರ ಕುಕ್ಕುಟ ಮಹಾ ಮಂಡಳಿ (ನಿ), ಕರ್ನಾಟಕ ಮಾಂಸ ಮತ್ತು ಕೋಳಿ ಮಾರಾಟ ನಿಗಮ ನಿಯಮಿತ ಇವುಗಳ ಸಹಕಾರದೊಂದಿಗೆ ಜಾನುವಾರು ಹಾಗೂ ಕುಕ್ಕುಟ ಕ್ಷೇತ್ರಗಳಲ್ಲಿ ಸಂಶೋಧನೆ ಮತ್ತು ಆಧುನೀಕ ತಾಂತ್ರಿಕತೆಯ ಬಳಕೆ, ವಿದೇಶಿ ತಳಿಗಳ ವೀರ್ಯಾಣು ಲಭ್ಯತೆಗೆ ಸಹಕಾರ ನೀಡುತ್ತಿರುವುದಲ್ಲದೇ ಈ ಕ್ಷೇತ್ರಗಳಲ್ಲಿ ರೈತರ ಹೆಚ್ಚಿನ ಆಸಕ್ತಿವಹಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗುತ್ತಿದೆ.


ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಈ ಕ್ಷೇತ್ರಗಳಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆಯಿಂದಾಗಿ ಸ್ಥಳೀಯ ಅಮೂಲ್ಯ ಜಾನುವಾರು ಮತ್ತು ಕುಕ್ಕುಟ ತಳಿಗಳ ಪಾಲನೆ, ಉನ್ನತಮಟ್ಟದ ಜಾನುವಾರು ಹಾಗು ಕುಕ್ಕುಟ ಆರೋಗ್ಯ ಸೇವೆ ಮತ್ತು ಒಳ್ಳೆಯ ಗುಣಮಟ್ಟದ ಪಶು ಮತ್ತು ಕುಕ್ಕುಟ ಆಹಾರಗಳ ಉತ್ಪಾದನೆ ಮತ್ತು ಪೂರೈಕೆಯಿಂದಾಗಿ ಹಾಲು, ಮೊಟ್ಟೆ, ಮಾಂಸ ಮತ್ತು ಉಣ್ಣೆಯ ಉತ್ಪಾದನೆ ರಾಜ್ಯದಲ್ಲಿ ಗಣನೀಯವಾಗಿ ಹೆಚ್ಚಲು ಕಾರಣವಾಗಿದೆ.

ಪಶುಸಂಗೋಪನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಹಾಗೂ ಸಹೋದರಿ ಸಂಸ್ಥೆಗಳ ಮೂಲಕ ದಿನಾಂಕ: 01-04-2009 ರಿಂದ 31-12-2009 ರವರೆಗೆ ಸಾಧಿಸಲಾದ ಪ್ರಗತಿ, ಹಮ್ಮಿಕೊಳ್ಳಲಾದ ಕಾರ್ಯಕ್ರಮಗಳ ವಿವರಗಳನ್ನು ಈ ಕಿರುಹೊತ್ತಿಗೆಯಲ್ಲಿ ನೀಡಲಾಗಿದೆ.


ಇಲಾಖೆಯು ಈ ಮುಂದೆ ತಿಳಿಸಿರುವಂತೆ ಮೂರು ಹಂತದ ಆಡಳಿತ ವ್ಯವಸ್ಥೆಯನ್ನು ಹೊಂದಿರುತ್ತದೆ :

ಆಡಳಿತ ವರ್ಗದ ರೇಖಾ ಚಿತ್ರ


## ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ
## ರಾಜ್ಯ ಮಟ್ಟದ ಆಡಳಿತ



## ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ
## ಜಿಲ್ಲಾ ಮಟ್ಟದ ಆಡಳಿತ




## ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ
## ತಾಲ್ಲೂಕು ಮಟ್ಟದ ಆಡಳಿತ



## III.ಇಲಾಖೆಯ ಕಾರ್ಯಚಟುವಟಿಕೆಗಳು

ಈ ಇಲಾಖೆಯ ಮುಖ್ಯ ಕಾರ್ಯ ಚಟುವಟಿಕೆಗಳನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ.

| | |
|---|---|
| 1 | **ಪಶುವೈದ್ಯಕೀಯ ಸೇವೆಗಳು ಮತ್ತು ಜಾನುವಾರು ಆರೋಗ್ಯ** |
| | ಅ. ರಾಜ್ಯದಲ್ಲಿನ ಪಶುವೈದ್ಯಕೀಯ ಸಂಸ್ಥೆಗಳ ವಿವರ |
| | ಆ. ಜಾನುವಾರು ರೋಗಗಳ ಕಣ್ಗಾವಲು ಯೋಜನೆ |
| | ಇ. ರಾಷ್ಟ್ರೀಯ ಪ್ರಾಧಾನ್ಯ ಜಾನುವಾರು ರೋಗಗಳ ಕ್ರಮಬದ್ಧ ನಿಯಂತ್ರಣ ಯೋಜನೆ |
| | ಈ. ರಾಷ್ಟ್ರೀಯ ದೊಡ್ಡರೋಗ ನಿವಾರಣಾ ಕಾರ್ಯಕ್ರಮ |
| | ಉ. ಪಶು ಆರೋಗ್ಯ ಹಾಗೂ ಜೈವಿಕ ಸಂಸ್ಥೆ |
| 2 | **ಜಾನುವಾರು ಅಭಿವೃದ್ಧಿ** |
| | ಅ. ಇಲಾಖಾ ವತಿಯಿಂದ ಜಾನುವಾರು ಅಭಿವೃದ್ಧಿ ಕಾರ್ಯಕ್ರಮಗಳು |
| | ಆ. ಜನಕ ಮೌಲ್ಯ ನಿರ್ಣಯ ಕೋಶ |
| 3 | **ಕುಕ್ಕುಟ ಅಭಿವೃದ್ಧಿ** |
| | ಅ. ಇಲಾಖಾ ವತಿಯಿಂದ ಕುಕ್ಕುಟ ಅಭಿವೃದ್ಧಿ ಕಾರ್ಯಕ್ರಮಗಳು |
| | ಆ. ಕರ್ನಾಟಕ ಸಹಕಾರಿ ಕುಕ್ಕುಟ ಮಹಾಮಂಡಳಿ, ಬೆಂಗಳೂರು |
| | ಇ. ಕರ್ನಾಟಕ ಕುಕ್ಕುಟ ಮತ್ತು ಪಶು ಆಹಾರಗಳ (ಉತ್ಪಾದನೆ ಮತ್ತು ಮಾರಾಟ ನಿಯಂತ್ರಣ) ಆಜ್ಞೆ 1988 ಹಾಗೂ ತಿದ್ದುಪಡಿ ಆಜ್ಞೆ 1991,1992 |
| 4 | **ಕುರಿ ಮತ್ತು ಉಣ್ಣೆ ಅಭಿವೃದ್ಧಿ** |
| | ಅ. ಇಲಾಖಾವತಿಯಿಂದ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಕಾರ್ಯಕ್ರಮಗಳು |
| | ಆ. ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ವತಿಯಿಂದ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಕಾರ್ಯಕ್ರಮಗಳು |
| 5 | **ಕ್ಷೀರಾಭಿವೃದ್ಧಿ** |
| | ಅ. ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿ, ನಿಯಮಿತ |
| | ಆ. ಹಾಲು ಮತ್ತು ಹಾಲಿನ ಉತ್ಪನ್ನಗಳ ಕುರಿತು ಆದೇಶ |
| 6 | ವರಾಹಾಭಿವೃದ್ಧಿ |
| 7 | ಮೊಲ ಅಭಿವೃದ್ಧಿ |
| 8 | ಮಾಂಸ ಮತ್ತು ಕೋಳಿ ಮಾರಾಟ |
| 9 | ಆಹಾರ ಮತ್ತು ಮೇವು ಅಭಿವೃದ್ಧಿ |
| 10 | ಸಾಮಾಜಿಕ-ಆರ್ಥಿಕ ಕಾರ್ಯಕ್ರಮಗಳು |
| 11 | ಜಾನುವಾರು ಗಣತಿ |
| 12 | ಸಮಗ್ರ ಮಾದರಿ ಸಮೀಕ್ಷೆ |
| 13 | ವಿಸ್ತರಣೆ ಮತ್ತು ತರಬೇತಿ |
| 14 | ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ |

## ಬಿ. ಜಾನುವಾರು ರೋಗಗಳ ಕಣ್ಗಾವಲು ಯೋಜನೆ

ಜಾನುವಾರುಗಳಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಪ್ರಾಮುಖ್ಯತೆಯುಳ್ಳ ಜಾನುವಾರು ಸಾಂಕ್ರಾಮಿಕ ರೋಗೋದ್ರೇಕಗಳನ್ನು ಕ್ರಮಬದ್ದವಾಗಿ ನಿಯಂತ್ರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರದ (50::50) ಆರ್ಥಿಕ ನೆರವಿನಿಂದ ಜಾನುವಾರು ರೋಗಗಳ ಕಣ್ಗಾವಲು ಪುರಸ್ಕೃತ ಯೋಜನೆಯನ್ನು ಕರ್ನಾಟಕ ರಾಜ್ಯ ಮಟ್ಟದಲ್ಲಿ 1984 ರಲ್ಲಿ ಸರ್ಕಾರಿ ಆದೇಶ ಸಂಖ್ಯೆ ಎಹೆಚ್-54/ವಿಎಲ್ಎಸ್-84 ರ ಪ್ರಕಾರ, ದಿನಾಂಕ:9-5-1984 ರಂದು ಪ್ರಾರಂಭಿಸಲಾಯಿತು. 2009-10 ನೇ ಸಾಲಿನಲ್ಲಿ ಆಸ್ಕಾಡ್ ಯೋಜನೆ ಅಡಿಯಲ್ಲಿ 75:25 (ಕೇಂದ್ರ:ರಾಜ್ಯ) ಅನುಪಾತದಲ್ಲಿ ಆರ್ಥಿಕ ನೆರವಿನಿಂದ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.

### 2009-10 ನೇ ಸಾಲಿನ ಧ್ಯೇಯ ಮತ್ತು ಉದ್ದೇಶಗಳು:

ಜಾನುವಾರುಗಳಲ್ಲಿ ಕಾಣಿಸಿಕೊಂಡ ರೋಗೋದ್ರೇಕಗಳ ವರದಿಗಳು ರಾಜ್ಯದಲ್ಲಿರುವ 29 ಜಿಲ್ಲೆಗಳಿಂದ ಬಂದಾಗ ಪ್ರಾಣಿ ಆರೋಗ್ಯ ಮತ್ತು ಜೈವಿಕ ಸಂಸ್ಥೆ, ಹೆಬ್ಬಾಳ ಮತ್ತು ಅವರದೇ ಆದಂತಹ ಪ್ರಾದೇಶಿಕ ಪ್ರಯೋಗಾಲಯಗಳ ವಿಜ್ಞಾನಿಗಳು ಅಥವಾ ಪಶುವೈದ್ಯಕೀಯ ಕಾಲೇಜು, ಹೆಬ್ಬಾಳದ ಪ್ರಾಧ್ಯಾಪಕರ ಜೊತೆಗೂಡಿ ಆ ಭಾಗಗಳಿಗೆ ಈ ಕೇಂದ್ರದ ತಾಂತ್ರಿಕ ಅಧಿಕಾರಿಗಳು ಭೇಟಿ ನೀಡಿ ಕೂಲಂಕುಷವಾಗಿ ಕಾಯಿಲೆಯ ಬಗ್ಗೆ ಪರಿಶೀಲಿಸಿ, ಆ ಭಾಗಗಳಿಂದ ವಿವಿಧ ಮಾದರಿಗಳನ್ನು ಪಡೆದು, ಪ್ರಯೋಗಾಲಯಗಳಿಗೆ ವಿಶ್ಲೇಷಣೆಗಾಗಿ ತಲುಪಿಸಿ, ಆ ಪ್ರಯೋಗಾಲಯಗಳಿಂದ ಬಂದಂತ ಫಲಿತಾಂಶಗಳನ್ನು ಸಂಬಂಧಿಸಿದವರಿಗೆ ನೀಡುವುದು. ಆ ಫಲಿತಾಂಶಗಳನ್ನಾಧರಿಸಿ ರಾಜ್ಯದಲ್ಲಿರುವ ಇಲಾಖಾ ಪಶುವೈದ್ಯಕೀಯ ಸಂಸ್ಥೆಗಳು ಜಾನುವಾರು ರೋಗಗಳನ್ನು ನಿಯಂತ್ರಿಸಲು ಕಾರ್ಯಾಚರಣೆಯನ್ನು ಮತ್ತು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಹಿಂದಿನ 5 ವರ್ಷಗಳಲ್ಲಿ ಉಂಟಾದ ರೋಗೋದ್ರೇಕಗಳ ಆಧಾರದ ಮೇಲೆ ವರದಿಗಳನ್ನು ಪರಿಶೀಲಿಸಿ, ಪಟ್ಟಿ ಮಾಡಿ, ವಿವಿಧ ರೋಗಗಳ ಮುನ್ಸೂಚನೆಯನ್ನು ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಆ ಭಾಗಗಳಲ್ಲಿ ರೋಗ ಹರಡದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಿ ಎರಡು ತಿಂಗಳು ಮುಂಚಿತವಾಗಿ ಕಳುಹಿಸಲಾಗುವುದು.

ರಾಜ್ಯದಲ್ಲಿರುವ ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರುಗಳಿಂದ ಪ್ರತಿ ತಿಂಗಳು ರೋಗೋದ್ರೇಕ ವರದಿಗಳನ್ನು ಪಡೆದು ಪರಿಶೀಲಿಸಿ, ವಿವಿಧ ರೋಗಗಳ ರೋಗೋದ್ರೇಕಗಳ ಸಂಖ್ಯೆ, ರೋಗ ಪೀಡಿತ ವಿವಿಧ ರಾಸುಗಳ ಸಂಖ್ಯೆ, ಮರಣಿಸಿದ ಸಂಖ್ಯೆ ಹಾಗೂ ರೋಗ ಹರಡದಂತೆ ಆ ಕಾಯಿಲೆಗಳ ವಿರುದ್ಧ ಚುಚ್ಚುಮದ್ದು/ಲಸಿಕೆ ನೀಡಿದ ಪ್ರಮಾಣ ಮಾಹಿತಿಯನ್ನು (ಹಳ್ಳಿಗಳ ಸಮೇತ) ಪರಿಶೀಲಿಸಿ, ಕ್ರೋಢೀಕರಿಸಿ ಕೇಂದ್ರ ಸರ್ಕಾರಕ್ಕೆ ವರದಿಯನ್ನು ಸಕಾಲದಲ್ಲಿ ಸಲ್ಲಿಸಲಾಗುತ್ತಿದೆ.

ರೋಗೋದ್ರೇಕಗಳ ಬಗ್ಗೆ ಪ್ರಥಮ ಹಂತದಲ್ಲಿ ವಿವಿಧ ಸ್ಥಳಗಳಿಂದ ಮಾಹಿತಿ ಬಂದು ತಲುಪಿದ ತಕ್ಷಣ, ಆ ಭಾಗಗಳ ಸುತ್ತಮುತ್ತಲಿರುವ ಮತ್ತು ಆ ಭಾಗಗಳಿಂದ ಜಾನುವಾರುಗಳು ಬರುವ ಮತ್ತು ಹೋಗಬಹುದಾದ ದಾರಿಗಳಲ್ಲಿನ ಹಳ್ಳಿಗಳಲ್ಲಿ ರೋಗ ಹರಡದಂತೆ, ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಈ ಕೇಂದ್ರದಿಂದ ಮಾಹಿತಿ ನೀಡಿ ಕಾಯಿಲೆಗಳನ್ನು ನಿಯಂತ್ರಿಸಲು ಸಹಾಯಕವಾಗಿ ಕಾರ್ಯ ನಿರ್ವಹಿಸಲಾಗುತ್ತಿದೆ.

## ಪಟ್ಟಿ–3

1-4-2009 ರಿಂದ 31-12-2009 ರವರೆಗೆ ರಾಜ್ಯದ ವಿವಿಧ ಭಾಗಗಳಲ್ಲಿ ಸಂಭವಿಸಿರುವ ವಿವಿಧ ರೋಗಗಳ ರೋಗೋದ್ರೇಕ, ರೋಗ ತಗುಲಿದ ರಾಸುಗಳು, ಮರಣಿಸಿದ ಪ್ರಮಾಣ ಹಾಗೂ ಅವುಗಳ ವಿರುದ್ಧ ಲಸಿಕೆ ಹಾಕಿರುವ ವಿವರ

| ಕ್ರ. ಸಂ. | ಕಾಯಿಲೆಗಳು | ರೋಗೋದ್ರೇಕದ ಸಂಖ್ಯೆ | ರೋಗಗ್ರಸ್ಥ ರಾಸುಗಳು | ಮರಣಿಸಿದ ರಾಸುಗಳು | ರೋಗದ ವಿರುದ್ಧ ಹಾಕಿದ ಲಸಿಕೆ ವಿವರ |
|---|---|---|---|---|---|
| 1 | ನರಡಿ ರೋಗ | 16 | 1193 | 129 | 204608 |
| 2 | ಚಪ್ಪೆ ರೋಗ | 173 | 448 | 191 | 735780 |
| 3 | ನೀಲಿ ನಾಲಿಗೆ ರೋಗ | 77 | 3272 | 644 | 380 |
| 4 | ಕುರಿಗಳ ಕರುಳು ಬೇನೆ | 116 | 799 | 257 | 5526218 |
| 5 | ಕಾಲುಬಾಯಿ ಜ್ವರ | 159 | 5154 | 337 | 7300131 |
| 6 | ಗಳಲೆ ಬೇನೆ | 153 | 2263 | 501 | 5214865 |
| 7 | ಪಿ ಪಿ ಆರ್ | 23 | 416 | 63 | 5402491 |
| 8 | ರೇಬಿಸ್ | 7 | 30 | 30 | 11174 |
| 9 | ರಾಣಿಕೇಟ್ | - | - | - | 5779068 |
| 10 | ಕುರಿ ಮತ್ತು ಮೇಕೆ ಸಿಡುಬು | 38 | 405 | 95 | 814924 |
| 11 | ಐ.ಬಿ.ಆರ್. | 1 | 10 | 10 | - |

## ಸಿ. ರಾಷ್ಟ್ರೀಯ ಪ್ರಾಧಾನ್ಯ ಜಾನುವಾರು ರೋಗಗಳ ಕ್ರಮಬದ್ಧ ನಿಯಂತ್ರಣ ಯೋಜನೆ

ರಾಷ್ಟ್ರೀಯ ಪ್ರಾಧಾನ್ಯ ಜಾನುವಾರು ರೋಗಗಳ ಕ್ರಮಬದ್ಧ ನಿಯಂತ್ರಣ ಯೋಜನೆಯು ನಮ್ಮ ರಾಜ್ಯದಲ್ಲಿ 1984-85 ನೇ ಸಾಲಿನಿಂದ ಅಸ್ತಿತ್ವಕ್ಕೆ ಬಂದಿರುತ್ತದೆ. ಈ ಯೋಜನೆಯಡಿಯಲ್ಲಿ ಆರ್ಥಿಕ ನಷ್ಟ ತರುವ ಸೋಂಕು ರೋಗಗಳಾದ ಕ್ಷಯ ಮತ್ತು ಕಂದು ರೋಗ, ನಾಯಿ ಹುಚ್ಚು ರೋಗ ಹಾಗೂ ಪುಲ್ಲೋರಂ ರೋಗಗಳನ್ನು ನಿಯಂತ್ರಿಸಲು ಪ್ರಾಮುಖ್ಯತೆಯನ್ನು ನೀಡಲಾಗಿರುತ್ತದೆ.

ಸದರಿ ಯೋಜನೆಯಡಿ ಕಾರ್ಯ ನಿರ್ವಹಿಸುತ್ತಿರುವ ಘಟಕಗಳು ಈ ಕೆಳಕಂಡಂತಿರುತ್ತದೆ:

1) ಉಪನಿರ್ದೇಶಕರು (ಕೇಂದ್ರ) ಕಛೇರಿ, ಹೆಬ್ಬಾಳ -1

2) ಕ್ಷಯ ಮತ್ತು ಕಂದು ರೋಗ ನಿಯಂತ್ರಣ ಘಟಕಗಳು – 4

3) ಪುಲ್ಲೋರಂ ನಿಯಂತ್ರಣ ಘಟಕಗಳು–10

4) ನಾಯಿ ಹುಚ್ಚು ನಿಯಂತ್ರಣ ಘಟಕಗಳು -6

ಈ ಯೋಜನೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಈ ಎಲ್ಲಾ ಘಟಕಗಳು ಉಪನಿರ್ದೇಶಕರ ಕಛೇರಿ (ಕೇಂದ್ರ) ಹೊರತುಪಡಿಸಿ, ದಿನಾಂಕ: 1-4-2006 ರಿಂದ ಸರ್ಕಾರದ ಆದೇಶ ಸಂಖ್ಯೆ:ಆಪಸಂ/ಯೋಜನೆ–3/ಆಸ್ಕಾಡ್/ಸಿಬ್ಬಂದಿ ವರ್ಗ/2006-07 ರಂತೆ ಆಸ್ಕಾಡ್ ಯೋಜನೆ (ಜಾನುವಾರು ರೋಗ ನಿಯಂತ್ರಣ) ಲೆಕ್ಕ ಶೀರ್ಷಿಕೆ: 2403-00-101-0-21 ಅಡಿಯಲ್ಲಿ ಆಯಾ ಜಿಲ್ಲಾ ವಲಯಕ್ಕೆ ವರ್ಗಾವಣೆಗೊಂಡು ಕಾರ್ಯ ನಿರ್ವಹಿಸುತ್ತಿವೆ.

ಈ ಯೋಜನೆಯ ಮುಖ್ಯ ಉದ್ದೇಶಗಳು :

1) ಜಾನುವಾರುಗಳಿಂದ ಜಾನುವಾರುಗಳಿಗೆ ಹಾಗೂ ಮಾನವರಿಗೆ ತಗಲುವ ಸೋಂಕು ರೋಗವನ್ನು ತಡೆಗಟ್ಟುವುದು.

2) ಸದರಿ ರೋಗಗಳಿಂದಾಗುವ ಆರ್ಥಿಕ ನಷ್ಟಗಳು ಹಾಗೂ ದುಷ್ಪರಿಣಾಮಗಳ ಬಗ್ಗೆ ಸಾಮಾನ್ಯ ಜನರಿಗೆ ಹಾಗೂ ರೈತರಿಗೆ ಮನವರಿಕೆ ಮಾಡಿಕೊಡುವುದು.

3) ಅಸ್ಕಾಡ್ ಯೋಜನೆಯಡಿಯಲ್ಲಿ ಜಾನುವಾರುಗಳಲ್ಲಿ ಕಂಡು ಬರುವ ಪ್ರಮುಖ ರೋಗಗಳಾದ ಕಾಲು ಬಾಯಿ ಜ್ವರ, ಗಳಲೆ ರೋಗ ಹಾಗೂ ಪಿ.ಪಿ.ಆರ್. ಕಾಯಿಲೆಯ ವಿರುದ್ಧ ಲಸಿಕೆಗಳನ್ನು ಮುಂಜಾಗ್ರತಾ ಕ್ರಮವಾಗಿ ನೀಡುವುದು.

ಘಟಕಗಳ ಉದ್ದೇಶ:

ಕ್ಷಯ ಮತ್ತು ಕಂದು ರೋಗ ನಿಯಂತ್ರಣ ಘಟಕ:

ಈ ಘಟಕಗಳು ಬೆಂಗಳೂರು ನಗರ ಜಿಲ್ಲೆ, ಧಾರವಾಡ, ಮೈಸೂರು ಮತ್ತು ಬೆಳಗಾವಿಯಲ್ಲಿ ಕಛೇರಿ ಗಳನ್ನು ಹೊಂದಿದ್ದು, ತಲಾ ಮೂರು ನೆರೆಯ ಜಿಲ್ಲೆಗಳನ್ನು ಒಳಗೊಂಡಂತೆ ಕಾರ್ಯವ್ಯಾಪ್ತಿಯನ್ನು ಹೊಂದಿರುತ್ತದೆ.

ಕಂದು ರೋಗವು ಬ್ರುಸೆಲ್ಲಾ ಗುಂಪಿನ ಬ್ಯಾಕ್ಟೀರಿಯಾದಿಂದ ಬರುವ ಖಾಯಿಲೆಯಾಗಿದ್ದು, ಪ್ರಮುಖವಾಗಿ ಗರ್ಭಕೋಶದ ಸೋಂಕನ್ನು ಉಂಟುಮಾಡುತ್ತದೆ. ಹೈನುಗಾರಿಕೆಯ ಉದ್ಯಮದಲ್ಲಿ ಸೋಂಕು ಇರುವ ಜಾನುವಾರುಗಳಲ್ಲಿ ಈ ಕಾಯಿಲೆಯಿಂದಾಗುವ ಆರ್ಥಿಕ ನಷ್ಟಕ್ಕೆ ಕಾರಣಗಳೆಂದರೆ ಕಂದು ಹಾಕುವುದು, ಕರುಗಳ ಉತ್ಪತ್ತಿ ಕಡಿಮೆಯಾಗುವುದು,ವಂಶಾಭಿವೃದ್ಧಿ ಶಕ್ತಿ ಕಳೆದುಕೊಳ್ಳುವುದು, ಹಾಲು, ಮಾಂಸ ಮತ್ತು ಉಣ್ಣೆ ಉತ್ಪತ್ತಿ ಕಡಿಮೆಯಾಗುವುದು. ಜಾನುವಾರುಗಳಲ್ಲಿ ಕಂಡುಬರುವ ರೋಗ ಲಕ್ಷಣಗಳಿಂದ ಹಾಗೂ ಪ್ರಯೋಗಾಲಯದ ಪರೀಕ್ಷೆಯಿಂದ ಕಂದು ರೋಗವನ್ನು ಪತ್ತೆ ಹಚ್ಚಬಹುದಾಗಿದೆ.

ಕ್ಷಯ ರೋಗವು ಮೈಕೋಬ್ಯಾಕ್ಟೀರಿಯಂ ಗುಂಪಿನ ರೋಗಾಣುವಿನಿಂದ ಕ್ರಮೇಣ ವೃದ್ಧಿಗೊಳ್ಳುವ ಕಾಯಿಲೆ. ಜಾನುವಾರುಗಳಿಂದ ಸಿಗುವ ಉಪಯುಕ್ತ ಪದಾರ್ಥಗಳ ಗುಣಮಟ್ಟ ಹಾಗೂ ಪ್ರಮಾಣ ಎರಡೂ ಗಣನೀಯವಾಗಿ ಈ ಕಾಯಿಲೆಯಿಂದ ಕಡಿಮೆಯಾಗಿ ಆರ್ಥಿಕ ನಷ್ಟವನ್ನು ಉಂಟುಮಾಡುತ್ತದೆ. ಜಾನುವಾರುಗಳಲ್ಲಿ ಕಂಡುಬರುವ ರೋಗ ಲಕ್ಷಣಗಳಿಂದ ಚರ್ಮದಲ್ಲಿ ಕ್ಷಯಾಣುಸಾರ (ಟ್ಯೂಬರ್ ಕ್ಯೂಲಿನ್) ಕೊಟ್ಟು ಇದರಿಂದ ಆಗಬಹುದಾದ ಚರ್ಮದ ಪ್ರತಿಕ್ರಿಯೆ ಆಧರಿಸಿ ಪ್ರಯೋಗಾಲಯದಲ್ಲಿ ರೋಗಾಣುಗಳನ್ನು ಬೆಳೆಯುವ ಮೂಲಕ ಕ್ಷಯ ರೋಗವನ್ನು ಪತ್ತೆ ಹಚ್ಚಬಹುದಾಗಿದೆ.

ಸದರಿ ಘಟಕದ ಅಧಿಕಾರಿ ಮತ್ತು ಸಿಬ್ಬಂದಿಯು ಮೇಲ್ಕಾಣಿಸಿದ ರೋಗವನ್ನು ದನಕರುಗಳಲ್ಲಿ ಪತ್ತೆಹಚ್ಚುತ್ತಾರೆ. ಈ ರೋಗದಿಂದಾಗುವ ಆರ್ಥಿಕ ನಷ್ಟ ಹಾಗೂ ಸೋಂಕು ತಗುಲಿರುವ ಜಾನುವಾರುಗಳನ್ನು ಇತರೆ ಜಾನುವಾರು ಹಾಗೂ ಮನುಕುಲದಿಂದ ಬೇರ್ಪಡಿಸಲು ಮಾಲೀಕರಿಗೆ ಸಲಹೆ ನೀಡಲಾಗುತ್ತದೆ. ಈ ಖಾಯಿಲೆಗೆ ತುತ್ತಾಗಿರುವ ಜಾನುವಾರುಗಳ ಮಾಲೀಕರಿಗೆ ಆರ್ಥಿಕ ಸಹಾಯ ನೀಡುವ ಅವಶ್ಯಕತೆ ಅಗತ್ಯವಾಗಿರುತ್ತದೆ.

## ನಾಯಿ ಹುಚ್ಚು ರೋಗ ನಿಯಂತ್ರಣ ಘಟಕ:

ಈ ಘಟಕಗಳು ಬೆಂಗಳೂರು ನಗರ ಜಿಲ್ಲೆ, ಮೈಸೂರು, ಮಂಗಳೂರು, ಧಾರವಾಡ, ಬೆಳಗಾವಿ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಕಾರ್ಯಸ್ಥಾನವನ್ನು ಹೊಂದಿರುತ್ತವೆ. ನಾಯಿ ಹುಚ್ಚು ರೋಗವು ಭಯಾನಕ ರೋಗವಾಗಿದ್ದು, ರಾಬ್ಡೋ ವೈರಸ್ ಗುಂಪಿಗೆ ಸೇರಿದ ವೈರಾಣುವಿನಿಂದ ಹರಡುತ್ತದೆ. ಈಗ ಮನುಷ್ಯರಲ್ಲಿ, ವನ್ಯ ಮತ್ತಿತರ ಪ್ರಾಣಿಗಳಲ್ಲಿ ಕಂಡುಬರುವ ಸೋಂಕು ರೋಗವಾಗಿರುತ್ತದೆ.

ಈ ಘಟಕದ ಸಿಬ್ಬಂದಿಯು ಸಾಮಾನ್ಯ ಜನರಿಗೆ ಹಾಗೂ ಜಾನುವಾರು ಮಾಲೀಕರಿಗೆ ನಾಯಿ ಹುಚ್ಚು ರೋಗದ ವಿರುದ್ಧ ಮುಂಜಾಗ್ರತಾ ಲಸಿಕೆ ಹಾಕುವಂತೆ (ವಿಶೇಷವಾಗಿ ನಾಯಿಗಳಿಗೆ) ಮನ ಒಲಿಸುವುದು. ನಾಯಿಗಳ ಸಂತಾನಹರಣ ಚಿಕಿತ್ಸೆ ಮಾಡುವ ಮೂಲಕ ಸಂತಾನ ಹೆಚ್ಚುವಿಕೆಯನ್ನು ತಡೆಗಟ್ಟುವುದು. ನಾಯಿ ಕಚ್ಚಿದಾಗ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ತಿಳುವಳಿಕೆ ನೀಡುವ ಕರ್ತವ್ಯವನ್ನು ನಿರ್ವಹಿಸುತ್ತಿರುತ್ತಾರೆ.

## ಪುಲ್ಲೋರಂ ನಿಯಂತ್ರಣ ಘಟಕ

ಈ ಘಟಕಗಳು ಬೆಂಗಳೂರು ನಗರ ಜಿಲ್ಲೆ (2 ಘಟಕಗಳು), ಮೈಸೂರು, ಕೋಲಾರ, ಬಳ್ಳಾರಿ, ಹಾಸನ, ಬೆಳಗಾವಿ, ರಾಯಚೂರು, ಗುಲ್ಬರ್ಗ ಹಾಗೂ ಮಂಗಳೂರು ಜಿಲ್ಲೆಗಳಲ್ಲಿ ಕಾರ್ಯ ಸ್ಥಾನವನ್ನು ಹೊಂದಿರುತ್ತವೆ. ಸಾಲ್ಮೋನಿಲ್ಲೋಸಿಸ್/ಬಿಳಿ ಬೇಧಿ ರೋಗವು ಸಾಲ್ಮೋನಿಲ್ಲಾ ಗುಂಪಿನ ಬ್ಯಾಕ್ಟೀರಿಯಾದಿಂದ ಹರಡುತ್ತದೆ. ಈ ಕಾಯಿಲೆ ಮೊಟ್ಟೆ ಮುಖಾಂತರ ಹರಡಲಿದ್ದು, ಮುಂದಿನ ಪೀಳಿಗೆಯ ಮರಿಗಳನ್ನು ರೋಗ ವಾಹಕವನ್ನಾಗಿ ಮಾಡುತ್ತದೆ. ಕೋಳಿ ಉದ್ದಿಮೆಯಲ್ಲಿ ಮರಿಗಳ ಉತ್ಪಾದನಾ ಮಟ್ಟದಿಂದ ಮಾರುಕಟ್ಟೆಯ ಹಂತದವರೆಗೂ ಈ ರೋಗವು ವ್ಯಾಪಕವಾಗಿ ಹರಡುವ ಸಾಧ್ಯತೆಗಳಿರುವುದರಿಂದ ಆರ್ಥಿಕ ನಷ್ಟವನ್ನು ಅನುಭವಿಸಬೇಕಾಗುತ್ತದೆ. ಈ ಘಟಕದ ಸಿಬ್ಬಂದಿಗಳು ಸರ್ಕಾರಿ ಹಾಗೂ ಖಾಸಗಿ ಕೋಳಿ ಫಾರಂಗಳಿಗೆ ಭೇಟಿ ನೀಡಿ ಪುಲ್ಲೋರಂ ರೋಗ ತಪಾಸಣೆ ಮಾಡುತ್ತಾರೆ. ಪುಲ್ಲೋರಂ ಸೋಂಕು ಇರುವ ಕೋಳಿಗಳನ್ನು ಪತ್ತೆ ಹಚ್ಚಿ ಖಾಯಿಲೆಯಿರುವ ಕೋಳಿಗಳನ್ನು ಪ್ರತ್ಯೇಕಿಸಿ ನಾಶಪಡಿಸಲು, ಫಾರಂನ ಸ್ವಚ್ಛತೆ ಹಾಗೂ ಉತ್ತಮ ನಿರ್ವಹಣೆ ಬಗ್ಗೆ ಹೆಚ್ಚಿನ ಗಮನ ಹರಿಸಲು ಮಾಲೀಕರಿಗೆ ಸಲಹೆ ನೀಡಲಾಗುತ್ತದೆ.

ಸದರಿ 2006-07ನೇ ಸಾಲಿನಲ್ಲಿ ಎಲ್ಲಾ ಅಧೀನ ಘಟಕಗಳು ಜಿಲ್ಲಾ ವಲಯಕ್ಕೆ ವರ್ಗವಾಗಿದ್ದು, ಯೋಜನೆಯ ಉದ್ದೇಶದ ಕಾರ್ಯಕ್ರಮಗಳ ತಾಂತ್ರಿಕ ಉಸ್ತುವಾರಿ ಮಾತ್ರ ಈ ಕಛೇರಿ ಹೊಂದಿದ್ದು, ಆಡಳಿತ ಉಸ್ತುವಾರಿಯನ್ನು ಹೊಂದಿರುವುದಿಲ್ಲ. ಆದುದರಿಂದ ಈ ಕಾರ್ಯಕ್ರಮದ ಅನುಷ್ಠಾನ, ಭೌತಿಕ ಮತ್ತು ಆರ್ಥಿಕ ಪ್ರಗತಿಗಳ ವಿಶ್ಲೇಷಣೆ ಹಾಗೂ ನಿಯಮಿತ ಪ್ರಗತಿ ವರದಿಗಳ ಸಲ್ಲಿಸುವಿಕೆಗಳಲ್ಲಿ ಅಡಚಣೆಯುಂಟಾಗುತ್ತದೆ.

ಈ ಎಲ್ಲಾ ಕ್ಲಿಷ್ಟ ಅಡಚಣೆಗಳಲ್ಲೂ ಸದರಿ ವರ್ಷಗಳಲ್ಲಿ ಕಂದು ರೋಗವನ್ನು ಪತ್ತೆ ಹಚ್ಚುವಿಕೆಯಲ್ಲಿ ಶೇ.75 ರಷ್ಟು, ಕ್ಷಯ ರೋಗ ಪತ್ತೆ ಹಚ್ಚುವಿಕೆಯಲ್ಲಿ ಶೇ.3 ರಷ್ಟು, ಪುಲ್ಲೋರಂ ರೋಗ ತಪಾಸಣೆಯಲ್ಲಿ ಶೇ.89, ನಾಯಿ ಹುಚ್ಚು ನಿಯಂತ್ರಣದ ಶಿಬಿರಗಳನ್ನು ಏರ್ಪಡಿಸುವಲ್ಲಿ ಶೇ.83 ರಷ್ಟು ಮತ್ತು ಜಾನುವಾರು/ಕುಕ್ಕುಟ ಫಾರಂಗಳ ಭೇಟಿಯಲ್ಲಿ ಶೇ.33 ರಷ್ಟು ಪ್ರಗತಿ ಸಾಧಿಸಲಾಗಿದೆ. ಉದ್ದೇಶಿತ ಯೋಜನೆಯ ಅನುಷ್ಠಾನದಲ್ಲಿ ಆಡಳಿತಾತ್ಮಕ ನಿಯಂತ್ರಣ, ವಾಹನ ಮತ್ತು ವಾಹನ ಚಾಲಕರ ಅವಶ್ಯಕತೆ ತುಂಬಾ ಇದ್ದು, ಈ ಎಲ್ಲಾ ಕೊರತೆಯಿಂದ ಉಸ್ತುವಾರಿ ಮತ್ತು ಅನುಷ್ಠಾನಗಳಲ್ಲಿ ಕುಂಠಿತ ಪ್ರಗತಿ ಸಾಧಿಸಲಾಗಿದೆ.

ಸದರಿ ಯೋಜನೆಯ ಉದ್ದೇಶಿತ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರದ ಆದೇಶದ ಪತ್ರ ಸಂ. 53-50/92/ ಎಲ್‌ಡಿಟಿ(ಎಲ್‌ಹೆಚ್‌ಎಸ್) ದಿನಾಂಕ: 7-10-1994, ಕೃಷಿ ಮಂತ್ರಾಲಯ (ಪಶುಸಂಗೋಪನೆ ಮತ್ತು ಹೈನುಗಾರಿಕೆ ಖಾತೆ) ರವರು ತಿಳಿಸಿರುವಂತೆ ರಾಜ್ಯ ಸರ್ಕಾರವು ಸ್ಟೇಟ್ ಕಂಟೇಜಿಯಸ್ ಡಿಸೀಸ್ ಆಫ್ (ದಿ ಮೈಸೂರು ಅನಿಮಲ್ ಡಿಸೀಸ್ ಕಂಟ್ರೋಲ್ ಆಕ್ಟ್ 1961)ನಲ್ಲಿ ಪ್ರಸ್ತಾಪಿಸಿರುವಂತೆ ಪ್ರಾಣಿಗಳಲ್ಲಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಪ್ರಸ್ತುತ ಇದನ್ನು ಜಾರಿಗೊಳಿಸಿದಾಗ ಹಲವಾರು ತೊಂದರೆಗಳಿದ್ದು, ಇವುಗಳನ್ನು ಇನ್ನೂ ಹೆಚ್ಚು ಅರ್ಥಪೂರ್ಣವಾಗಿ ಜಾರಿಗೊಳಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಕ್ಷಯ ಮತ್ತು ಕಂದು ರೋಗ ಪೀಡಿತ ರಾಸುವಿಗೆ ರೂ.15,000/- ಪರಿಹಾರ ಧನ ನಿಗದಿಪಡಿಸಿ ರೋಗ ಪೀಡಿತ ರಾಸುವಿನ ಮೂರು ವರ್ಷ ನಿರ್ವಹಣೆ ಹಾಗೂ ಗೋಶಾಲೆಗಳಿಗೆ ಸ್ಥಳಾಂತರಿಸುವುದಕ್ಕೆ ರೂ.25,000/-ಗಳನ್ನು ನಿಗಧಿಪಡಿಸಿದಲ್ಲಿ ಉಪಯುಕ್ತವಾಗುತ್ತದೆ ಹಾಗೂ ರಾಜ್ಯದಲ್ಲಿರುವ ಎಲ್ಲಾ ಬ್ರೀಡಿಂಗ್ ಕೋಳಿ ಫಾರಂಗಳನ್ನು ಕಡ್ಡಾಯವಾಗಿ ನೋಂದಾಯಿಸಿ, ಪುಲ್ಲೋರಂ ಖಾಯಿಲೆ ಪರೀಕ್ಷಿಸಲು ಆದೇಶಿಸುವುದು ಹಾಗೂ ಮೇಲ್ಕಾಣಿಸಿದ ಎಲ್ಲಾ ರೋಗಗಳ ತಡೆಗಟ್ಟುವಿಕೆ ಕುರಿತು ವಿಸ್ತರಣಾ (ಎಕ್ಸ್‌ಟೆನ್‌ಷನ್) ಚಟುವಟಿಕೆಗಳನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಅರ್ಥಪೂರ್ಣವಾಗಿ ಕೈಗೊಳ್ಳಲು ಆಧುನಿಕ ಉಪಕರಣಗಳಾದ ಲ್ಯಾಪ್‌ಟಾಪ್, ಎಲ್.ಸಿ.ಡಿ. ಮತ್ತು ಮಲ್ಟಿ ಮೀಡಿಯ/ಸಿ.ಡಿ. ಇತ್ಯಾದಿಗಳನ್ನು ಬಳಸಲು ಹೆಚ್ಚಿನ ವಂಟನ ನಿಗಧಿಪಡಿಸಿ, ವಾಹನ ಮತ್ತು ವಾಹನ ಚಾಲಕರನ್ನು ಲಭ್ಯಗೊಳಿಸಿದಲ್ಲಿ ಬರುವ ವರ್ಷಗಳಲ್ಲಿ ಸದರಿ ಕಾರ್ಯಕ್ರಮವನ್ನು ಇನ್ನೂ ಹೆಚ್ಚು ಪ್ರಭಾವಿತವಾಗಿ ಅನುಷ್ಠಾನಗೊಳಿಸಬಹುದು.

ಸದರಿ ಯೋಜನೆಯಲ್ಲಿ ದಿನಾಂಕ:1-4-2009 ರಿಂದ 31-12-2009 ರವರೆಗೆ ಸಾಧಿಸಲಾದ ಪ್ರಗತಿಯ ವಿವರಗಳನ್ನು ಪಟ್ಟಿ-4 ರಲ್ಲಿ ಕೊಡಲಾಗಿದೆ.

### ಪಟ್ಟಿ-4

### ರಾಷ್ಟ್ರೀಯ ಪ್ರಾಧಾನ್ಯ ಜಾನುವಾರು ರೋಗಗಳ ಕ್ರಮಬದ್ಧ ನಿಯಂತ್ರಣ ಯೋಜನೆಯಡಿಯಲ್ಲಿ ದಿನಾಂಕ: **1-4-2009** ರಿಂದ **31-12-2009** ರವರೆಗೆ ಈ ಕಾರ್ಯಕ್ರಮಗಳಲ್ಲಿ ಸಾಧಿಸಿದ ಪ್ರಗತಿ

| ಕ್ರ.ಸಂ. | ವಿವಿಧ ಘಟಕಗಳ ಕಾರ್ಯಕ್ರಮಗಳು | ಭೌತಿಕ ಪ್ರಗತಿ |
|---|---|---|
| 1 | ಉಪನಿರ್ದೇಶಕರು (ಕೇಂದ್ರ) ಹೆಬ್ಬಾಳ, ಬೆಂಗಳೂರು:<br>ಅ. ಜಾನುವಾರು/ಕೋಳಿ ಫಾರಂಗಳಿಗೆ ಭೇಟಿ | 62 |
| 2 | ನಾಯಿ ಹುಚ್ಚು ತಡೆ ಯೋಜನೆಗಳು: | |
| | ಅ. ರೇಬೀಸ್ ರೋಗದ ವಿರುದ್ಧ ವಿಸ್ತರಣಾ ಕಾರ್ಯಕ್ರಮ | 1079 |
| 3 | ಕ್ಷಯ ಮತ್ತು ಕಂದು ರೋಗ ನಿಯಂತ್ರಣ ಘಟಕಗಳು: | |
| | ಅ. ಜಾನುವಾರುಗಳಲ್ಲಿ ಕ್ಷಯ ರೋಗ ತಪಾಸಣೆ | 558 |
| | ಆ. ಜಾನುವಾರುಗಳಲ್ಲಿ ಕಂದು ರೋಗ ತಪಾಸಣೆ | 12153 |
| 4 | ಪುಲ್ಲೋರಂ ನಿಯಂತ್ರಣ ಘಟಕಗಳು: | |
| | ಅ. ಕುಕ್ಕುಟಗಳಲ್ಲಿ ಪುಲ್ಲೋರಂ ರೋಗ ತಪಾಸಣೆ | 764125 |
| 5 | ಕಾಲುಬಾಯಿ ಜ್ವರ ರೋಗದ ಲಸಿಕೆಯನ್ನು ವಿವಿಧ ಜಿಲ್ಲೆಗಳಿಗೆ ಸರಬರಾಜು ಮಾಡಿದ್ದು | 7877100 (ಡೋಸೆಸ್) |

## ಡಿ. ರಾಷ್ಟ್ರೀಯ ದೊಡ್ಡರೋಗ ನಿವಾರಣಾ ಕಾರ್ಯಕ್ರಮ

**ಪೀಠಿಕೆ:-**

ಸೀಳು ಗೊರಸಿನ ಜಾನುವಾರುಗಳಿಗೆ ತಗಲುವ ಭೀಕರ ಸಾಂಕ್ರಾಮಿಕ ರೋಗವಾದ ದೊಡ್ಡ ರೋಗದಿಂದ ರಾಷ್ಟ್ರಕ್ಕೆ ಮತ್ತು ಪಶುಪಾಲಕರಿಗೆ ಪಶು ಸಂಪತ್ತಿನ ಅತೀವ ನಷ್ಟ ಅನುಭವಿಸಬೇಕಾಗುತಿತ್ತು, ಹಾಗೂ ಪಶು ಉತ್ಪಾದನೆ ಕುಂಠಿತದಿಂದ ಮತ್ತು ಪಶು ಮತ್ತು ಪಶು ಉತ್ಪನ್ನಗಳ ಆಮದು ಮತ್ತು ರಫ್ತಿನಲ್ಲಿ ದಕ್ಕೆ ಉಂಟಾಗಿ ಬಹಳಷ್ಟು ನಷ್ಟ ಉಂಟಾಗುತಿತ್ತು. ಈ ಭಯಂಕರ ರೋಗವನ್ನು ನಮ್ಮ ರಾಷ್ಟ್ರದಿಂದ ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಭಾರತ ಸರ್ಕಾರದವರು ಐರೋಪ್ಯ ಆರ್ಥಿಕ ಒಕ್ಕೂಟದ ಸಹಯೋಗದಿಂದ ರಾಷ್ಟ್ರೀಯ ದೊಡ್ಡರೋಗ ನಿವಾರಣಾ ಯೋಜನೆಯನ್ನು 1989-90 ನೇ ಸಾಲಿನಿಂದ ಹಮ್ಮಿಕೊಂಡಿರುತ್ತಾರೆ. ಈ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನದಿಂದ ಜುಲೈ 1995 ರಿಂದ ಈಚೆಗೆ ಕರ್ನಾಟಕ ರಾಜ್ಯದಲ್ಲಿ ದೊಡ್ಡ ರೋಗದ ಇರುವಿಕೆ ಎಲ್ಲಿಯೂ ಕಂಡು ಬಂದಿರುವುದಿಲ್ಲವಾದ ಪ್ರಯುಕ್ತ ಕರ್ನಾಟಕ ರಾಜ್ಯವನ್ನು ದಿನಾಂಕ : 27-05-2004 ರಿಂದ ದೊಡ್ಡ ರೋಗದಿಂದ ಮುಕ್ತಗೊಂಡ ರಾಜ್ಯವೆಂದು ಘೋಷಿಸಲಾಗಿದೆ.

**ಮುಖ್ಯ ಉದ್ದೇಶ:**

ಜಾನುವಾರುಗಳಿಗೆ ಬರಬಹುದಾದ ದೊಡ್ಡರೋಗ ಕಾಯಿಲೆಯನ್ನು ನಿರ್ಮೂಲನೆ ಮಾಡುವುದು.

**ಕಣ್ಗಾವಲು ಕಾರ್ಯಕ್ರಮ:**

ಕರ್ನಾಟಕ ರಾಜ್ಯದಲ್ಲಿ ದೊಡ್ಡರೋಗ ಮತ್ತು ದೊಡ್ಡರೋಗದಂತಹ ಕಾಯಿಲೆಗಳ ಇರುವಿಕೆಯನ್ನುಪತ್ತೆಹಚ್ಚುವ ಸಲುವಾಗಿ ಈ ಕೆಳಗಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.

- **ಹಳ್ಳಿಗಳಲ್ಲಿ ದೊಡ್ಡರೋಗ ಅಥವಾ ದೊಡ್ಡರೋಗದಂತಹ (ಪಿ.ಪಿ.ಆರ್.) ಕಾಯಿಲೆ ಇರುವಿಕೆಯನ್ನು ಪತ್ತೆಹಚ್ಚುವ ಕಾರ್ಯಕ್ರಮ:**

ಕರ್ನಾಟಕ ರಾಜ್ಯದ ಪ್ರತಿಯೊಂದು ಹಳ್ಳಿಯಲ್ಲಿ ದೊಡ್ಡರೋಗ ಅಥವಾ ಪಿಪಿಆರ್ ಕಾಯಿಲೆ ಇರುವ ಬಗ್ಗೆ ಇಲಾಖೆಯ ತಾಂತ್ರಿಕ ಸಿಬ್ಬಂದಿ ಅವರವರ ಸರಹದ್ದಿನ ಹಳ್ಳಿಗಳಿಗೆ ಭೇಟಿ ನೀಡಿ, ಸದರಿ ಕಾಯಿಲೆ ಇದೆ ಅಥವಾ ಇಲ್ಲ ಎಂಬ ವರದಿಯನ್ನು ಸಂಬಂಧಪಟ್ಟ ನಮೂನೆಗಳಲ್ಲಿ ಸಂಗ್ರಹಿಸಿ ವರದಿ ಸಲ್ಲಿಸುತ್ತಾರೆ . 2009-10 ನೇ ಸಾಲಿನಲ್ಲಿ ನಿಗಧಿಪಡಿಸಿರುವ ಡಿಸೆಂಬರ್ 2009 ರವರೆಗೆ ಗುರಿ 40938, ಡಿಸೆಂಬರ್ 2009 ರವರೆಗೆ ಪ್ರಗತಿ 41257, ಶೇ.101 ರಷ್ಟು ಮಾಡಲಾಗಿದೆ.

- **ದಿನದ ಪುಸ್ತಕ ಪರಿಶೀಲನೆ**

ಕರ್ನಾಟಕ ರಾಜ್ಯದ ಪಶುವೈದ್ಯಕೀಯ ಸಂಸ್ಥೆಗಳಿಗೆ ಚಿಕಿತ್ಸೆಗಾಗಿ ಬರುವ ಎಲ್ಲಾ ರಾಸುಗಳ ಆರೋಗ್ಯ ತಪಾಸಣೆ ಅವಧಿಯಲ್ಲಿ ದೊಡ್ಡರೋಗ ಅಥವಾ ಪಿಪಿಆರ್ ಕಾಯಿಲೆಯ ಲಕ್ಷಣಗಳು ಕಂಡು ಬಂದಲ್ಲಿ ಅಂತಹ ಜಾನುವಾರುಗಳ ಬಗ್ಗೆ ದಿನದ ಪುಸ್ತಕದಲ್ಲಿ ಪ್ರತ್ಯೇಕವಾಗಿ ನಮೂದಿಸಿ, ಆ ರಾಸುಗಳಿಗೆ ನೀಡಲಾದ ಚಿಕಿತ್ಸೆಯ ವಿವರದೊಂದಿಗೆ ರಕ್ತದ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸಿ ಫಲಿತಾಂಶ ದೊರೆತ ನಂತರ ದಿನದ ಪುಸ್ತಕದಲ್ಲಿ ನಮೂದಿಸಲಾಗುತ್ತಿದೆ. ಆಯಾ ಜಿಲ್ಲೆಯ ದೊಡ್ಡರೋಗ ನಿವಾರಣಾ ಯೋಜನೆಯ ಸಹಾಯಕ ನಿರ್ದೇಶಕರು ಹಾಗೂ ಉಪ ನಿರ್ದೇಶಕರು ತಮ್ಮ ಜಿಲ್ಲೆಗೆ ಸಂಬಂಧಿಸಿದ ಸಂಸ್ಥೆಗಳಿಗೆ ಭೇಟಿ

ನೀಡಿ, ದಿನದ ಪುಸ್ತಕ ಪರಿಶೀಲಿಸಿ ವರದಿಯನ್ನು ಸಲ್ಲಿಸುತ್ತಾರೆ. 2009-10 ನೇ ಸಾಲಿನಲ್ಲಿ ನಿಗಧಿಪಡಿಸಿರುವ ಡಿಸೆಂಬರ್ 2009 ರವರೆಗೆ ಗುರಿ 5343, ಡಿಸೆಂಬರ್ 2009 ರವರೆಗೆ ಪ್ರಗತಿ 5702, ಶೇ.107 ರಷ್ಟು ಮಾಡಲಾಗಿದೆ.

- **ಹೆದ್ದಾರಿ ಹಳ್ಳಿಗಳಲ್ಲಿ ದೊಡ್ಡರೋಗ ಅಥವಾ ಪಿ.ಪಿ.ಆರ್. ಕಾಯಿಲೆ ಪತ್ತೆ ಹಚ್ಚುವ ಕಾರ್ಯಕ್ರಮ**

ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳ ಅಕ್ಕಪಕ್ಕದ ಒಂದು ಕಿಲೋಮೀಟರ್ ವ್ಯಾಪ್ತಿಯೊಳಗೆ ಬರುವ ಹಳ್ಳಿಗಳಿಗೆ ಸಂಬಂಧಿಸಿದ ಪಶುವೈದ್ಯಕೀಯ ಸಂಸ್ಥೆಯ ತಾಂತ್ರಿಕ ಸಿಬ್ಬಂದಿ ಪ್ರತಿ ತಿಂಗಳು ಕಡ್ಡಾಯವಾಗಿ ಭೇಟಿ ಇತ್ತು, ಈ ಕಾಯಿಲೆಯ ಇರುವಿಕೆಯನ್ನು ವರದಿ ಮಾಡುತ್ತಾರೆ. ಪತ್ತೆಹಚ್ಚುವ ಈ ಕಾರ್ಯಕ್ರಮದಡಿ 2009-10 ನೇ ಸಾಲಿನಲ್ಲಿ ನಿಗಧಿಪಡಿಸಿರುವ ಡಿಸೆಂಬರ್ 2009 ರವರೆಗೆ ಗುರಿ 36522, ಡಿಸೆಂಬರ್ 2009 ರವರೆಗೆ ಪ್ರಗತಿ 36522, ಶೇ.100 ರಷ್ಟು ಮಾಡಲಾಗಿದೆ.

ಈ ಯೋಜನೆಯ ಕಾರ್ಯಕ್ರಮದಡಿಯಲ್ಲಿ ಒಟ್ಟು 167 ಜಾನುವಾರುಗಳಿಂದ ರಕ್ತದ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಅದರಲ್ಲಿ ದೊಡ್ಡರೋಗ ಕಾಯಿಲೆ ಯಾವುದೂ ಇಲ್ಲವೆಂದು ಖಚಿತಪಡಿಸಲಾಗಿದೆ. ಆದರೆ ಇವುಗಳ ಪೈಕಿ 24 ರಲ್ಲಿ ಪಿ.ಪಿ.ಆರ್. ಕಾಯಿಲೆ ಇರುವ ಬಗ್ಗೆ ದೃಡೀಕರಿಸಲಾಗಿದೆ.

1998 ರ ಮಾರ್ಚ್‌ನಿಂದೀಚೆಗೆ ದೊಡ್ಡರೋಗದ ವಿರುದ್ಧ ಲಸಿಕೆ ಕಾರ್ಯಕ್ರಮ ರದ್ದಾಗಿರುವ ಪ್ರಯುಕ್ತ 2009-10 ನೇ ಸಾಲಿನಲ್ಲಿ ರಾಜ್ಯದಲ್ಲಿ ದೊಡ್ಡರೋಗದ ವಿರುದ್ಧ ಯಾವುದೇ ಲಸಿಕೆ ಕಾರ್ಯಕ್ರಮ ಕೈಗೊಂಡಿರುವುದಿಲ್ಲ.

**2009-10 ನೇ ಸಾಲಿನಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳು:**

1. ಹಳ್ಳಿಗಳಲ್ಲಿ ದೊಡ್ಡರೋಗ ಪತ್ತೆ ಹಚ್ಚುವ ಕಾರ್ಯಕ್ರಮ
2. ಹೆದ್ದಾರಿಯಲ್ಲಿ ಬರುವ ಹಳ್ಳಿಗಳಲ್ಲಿ ದೊಡ್ಡರೋಗ ಪತ್ತೆ ಹಚ್ಚುವ ಕಾರ್ಯಕ್ರಮ
3. ದಿನದ ಪುಸ್ತಕ ಪರಿಶೀಲನೆ ಕಾರ್ಯಕ್ರಮ
4. ಪಶುವೈದ್ಯ ಸಂಸ್ಥೆಗಳಿಗೆ ರೆಫ್ರಿಜರೇಟರ್, ಸಿರೆಂಜ್ ಮತ್ತು ನೀಡಲ್‌ಗಳ ಸರಬರಾಜು ಮಾಡುವ ಕಾರ್ಯಕ್ರಮ ಕೈಗೊಳ್ಳಲಾಗಿದೆ.

## ಪಟ್ಟಿ-8

### ದಿನಾಂಕ: 1-4-2009 ರಿಂದ 31-12-2009 ರವರೆಗೆ ಜಾನುವಾರು ಕ್ಷೇತ್ರಗಳಲ್ಲಿ ಸಾಧಿಸಿದ ಪ್ರಗತಿಯ ವಿವರ

| ಕ್ರ ಸಂ | ಜಾನುವಾರು ಕ್ಷೇತ್ರದ ಹೆಸರು | ಕ್ಷೇತ್ರದ ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ) | ಆರ್ಥಿಕ ಸಾಧನೆ (ಲಕ್ಷ ರೂ.ಗಳಲ್ಲಿ) | | | | ಒಟ್ಟು ಆದಾಯ (ಲಕ್ಷ ರೂ. ಗಳಲ್ಲಿ) | ಭೌತಿಕ ಸಾಧನೆ (ಸಂಖ್ಯೆಗಳಲ್ಲಿ) | | |
|---|---|---|---|---|---|---|---|---|---|---|
| | | | ಯೋಜನೆ | | ಯೋಜನೇತರ | | | | | |
| | | | ವಂಟನ | ವ್ಯಯ | ವಂಟನ | ವ್ಯಯ | | ದನ ಗಳು | ಕರುಗಳು | ತರಬೇತಿ ಪಡೆದವ ವರು |
| 1 | ರಾಜ್ಯ ಜಾನುವಾರು ತಳಿ ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಹೆಸರಘಟ್ಟ | 441.06 | 35.95 | 8.80 | 21.28 | 10.58 | 99.80 | 138 | 1512 | 518 |
| 2 | ಜಾನುವಾರು ತಳಿ ಸಂವರ್ದನಾ ಕ್ಷೇತ್ರ, ಹೆಸರಘಟ್ಟ, ಬೆಂಗಳೂರು ನಗರ ಜಿಲ್ಲೆ | 400.00 | 17.00 | - | 8.14 | 5.82 | 36.07 | 57 | 12 | 327 |
| 3 | ಜಾನುವಾರು ತಳಿ ಸಂವರ್ದನಾ ಮತ್ತು ತರಬೇತಿ ಕೇಂದ್ರ, ಧಾರವಾಡ ಜಿಲ್ಲೆ | 25.20 | 12.94 | 12.94 | 28.28 | 28.28 | 5.94 | 11 | 2 | 281 |
| 4 | ಜಾನುವಾರು ತಳಿ ಸಂವರ್ದನಾ ಮತ್ತು ತರಬೇತಿ ಕೇಂದ್ರ, ಕುರಿಕುಪ್ಪಿ, ಬಳ್ಳಾರಿ ಜಿಲ್ಲೆ | 273.60 | - | - | 44.98 | 44.88 | 2.35 | - | - | 187 |
| 5 | ಜಾನುವಾರು ತಳಿ ಸಂವರ್ದನಾ ಮತ್ತು ತರಬೇತಿ ಕೇಂದ್ರ, ಮುನಿರಾಬಾದ್, ರಾಯಚೂರು ಜಿಲ್ಲೆ | 106.00 | 1.55 | 1.55 | 1.6 | 1.6 | 0.44 | 23 | 2 | 86 |
| 6 | ಜಾನುವಾರು ತಳಿ ಸಂವರ್ದನಾ ಮತ್ತು ತರಬೇತಿ ಕೇಂದ್ರ, ಕೊಯ್ಲಾ, ದಕ್ಷಿಣ ಕನ್ನಡ ಜಿಲ್ಲೆ | 308.00 | 16.25 | 0.30 | 16.24 | 10.68 | 3.47 | 82 | 25 | 126 |
| 7 | ಜರ್ಸಿ ತಳಿ ಸಂವರ್ದನಾ ಕೇಂದ್ರ, ಕೂಡಿಗೆ, ಕೊಡಗು ಜಿಲ್ಲೆ | 56.00 | 32.71 | 10.97 | 8.82 | 5.75 | 2.19 | 58 | 18 | 36 |
| 8 | ಎಮ್ಮೆ ತಳಿ ಸಂವರ್ದನಾ ಕೇಂದ್ರ, ತೇಗೂರು, ಧಾರವಾಡ ಜಿಲ್ಲೆ | 131.92 | 26.00 | 6.29 | 12.13 | 3.62 | 2.66 | 96 | 33 | 724 |
| 9 | ಖಿಲ್ಲಾರ್ ತಳಿ ಸಂವರ್ದನಾ ಕೇಂದ್ರ, ಬಂಕಾಪುರ, ಹಾವೇರಿ ಜಿಲ್ಲೆ | 55.64 | 1.02 | 1.02 | 10.53 | 10.53 | 2.82 | 176 | 31 | 278 |
| 10 | ಹಳ್ಳಿಕಾರ್ ತಳಿ ಸಂವರ್ದನಾ ಕೇಂದ್ರ, ಕುಣಿಕೇನಹಳ್ಳಿ, ತುಮಕೂರು ಜಿಲ್ಲೆ | 370.00 | 6.00 | 2.77 | 22.87 | 29.67 | 0.73 | 89 | 15 | 75 |
| 11 | ಅಮೃತ್‌ಮಹಲ್ ತಳಿ ಸಂವರ್ಧನಾ ಕೇಂದ್ರ, ಅಜ್ಜಂಪುರ, ಚಿಕ್ಕಮಗಳೂರು ಜಿಲ್ಲೆ | 13555.59 | 34.75 | 14.99 | 17.03 | 44.48 | 1.57 | 1313 | 338 | - |
| | ಒಟ್ಟು | 15723.01 | 184.17 | 59.63 | 191.90 | 195.89 | 158.04 | 2043 | 1988 | 2638 |



ಹಳ್ಳಿಕಾರ್ ಹಸು



ಜರ್ಸಿ ಹಸು



ಹೆಚ್.ಎಫ್. ಹೋರಿ



ಅಮೃತಮಹಲ್ ಹೋರಿ



ಕಿಲಾರಿ ಹೋರಿ



ಮುರಾ ಎಮ್ಮೆ

## ಬಿ. ಜನಕ ಮೌಲ್ಯ ನಿರ್ಣಯ ಕೋಶ

ಕೃಷಿ ಆಧಾರಿತ ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಜಾನುವಾರುಗಳ ಪಾತ್ರ ಪ್ರಮುಖವಾಗಿದ್ದು, ದೇಶದ ಒಟ್ಟು ಆದಾಯಕ್ಕೆ ಅವುಗಳ ಕೊಡುಗೆ ಶೇಕಡ 15 ಕ್ಕೂ ಮೇಲ್ಪಟ್ಟಿದೆ. ಬಹುತೇಕ ಕೃಷಿಕರಿಗೆ ಜಾನುವಾರು ಪೋಷಣೆ ಒಂದು ಉಪ ಕಸುಬಾಗಿದೆ. ವಿಶೇಷವಾಗಿ ಮಳೆ ಆಧಾರಿತ ಒಣ ಪ್ರದೇಶಗಳಲ್ಲಿ ಕೃಷಿಕ ಸಮುದಾಯಕ್ಕೆ ಜೀವನಾಧಾರದ ಮೂಲವಾಗಿದೆ. ಹೆಣ್ಣು ಪೀಳಿಗೆ ಹಾಲು ಪೂರೈಸಿದರೆ, ಗಂಡು ಪೀಳಿಗೆಯು ಬೇಸಾಯ ಹಾಗೂ ಇತರೆ ದುಡಿಮೆಗೆ ಅನುಕೂಲವಾಗುತ್ತದೆ. ಹಾಗೆಯೇ ಮಾಂಸ, ಚರ್ಮ, ಮೂಳೆ ಮತ್ತು ಸಾಕಷ್ಟು ಗೊಬ್ಬರ ಕೊಡುವ ಮೂಲಕ ಸುಸ್ಥಿರ ಬೇಸಾಯಕ್ಕೆ ತಳಹದಿಯಾಗಿರುತ್ತದೆ.

ಜಾನುವಾರು ಅಭಿವೃದ್ಧಿ ಇಲಾಖೆಯ ಬಹುಮುಖ್ಯ ಚಟುವಟಿಕೆಯಾಗಿರುತ್ತದೆ. ಕೃತಕ ಗರ್ಭಧಾರಣೆ ತಂತ್ರವನ್ನು ಅಳವಡಿಸಿಕೊಂಡು ಸ್ಥಳೀಯ ಜಾನುವಾರುಗಳ ಉತ್ಪಾದಕತೆಯನ್ನು ಹೆಚ್ಚಿಸಲು ಕೈಗೊಂಡಿರುವ ಮಿಶ್ರತಳೀಕರಣ ಕಾರ್ಯಕ್ರಮಗಳು ಸಾಕಷ್ಟು ಯಶಸ್ಸು ಕಂಡಿವೆ. ಜಾನುವಾರು ಅಭಿವೃದ್ಧಿ ಕಾರ್ಯಕ್ರಮದಡಿ ತಳಿ ಅಭಿವೃದ್ಧಿ ಯೋಜನೆಯನ್ನು ರೂಪಿಸಲಾಗಿದ್ದು, ಉತ್ತಮ ಗುಣಮಟ್ಟದ ಹೆಚ್ಚು ಹಾಲು ನೀಡುವ ಗುಣಗಳುಳ್ಳ ತಳಿಗಳ ಹೋರಿಗಳನ್ನು ಆಯ್ಕೆ ಮಾಡಿ, ಅವುಗಳ ವೀರ್ಯ ಸಂಗ್ರಹಣೆ ಮಾಡಿ ಈ ವೀರ್ಯವನ್ನು ಸ್ಥಳೀಯ ರಾಸುಗಳಿಗೆ ಕೃತಕ ಗರ್ಭಧಾರಣೆ ಮಾಡಿ ಹೆಚ್ಚಿನ ಹಾಲು ಇಳುವರಿ ನೀಡುವಂತಹ ರಾಸುಗಳನ್ನು ಉತ್ಪದಿಸುವುದಲ್ಲದೆ, ಸ್ಥಳೀಯ ರಾಸುಗಳ ದುಡಿಮೆ ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿ ಉತ್ತಮ ದುಡಿಮೆಯ ಗುಣಗಳುಳ್ಳ ಅಮೃತ್ ಮಹಲ್, ಹಳ್ಳಿಕಾರ್ ಮತ್ತು ಸೂರ್ತಿ ಹೋರಿಗಳನ್ನು ಆಯ್ಕೆ ಮಾಡಿ ಅವುಗಳ ವೀರ್ಯದಿಂದ ಕೃತಕ ಗರ್ಭಧಾರಣೆ ಮಾಡಲಾಗುತ್ತಿದೆ.

ಪ್ರಸ್ತುತ ಘನೀಕೃತ ವೀರ್ಯ ತಂತ್ರಜ್ಞಾನ ಅಳವಡಿಸಿ ಕೃತಕ ಗರ್ಭಧಾರಣೆಯನ್ನು ಕೈಗೊಳ್ಳಲಾಗುತ್ತಿದೆ. ರಾಜ್ಯದಲ್ಲಿನ ಘನೀಕೃತ ವೀರ್ಯನಳಿಕೆಗಳ ಬೇಡಿಕೆಯನ್ನು ಇಲಾಖೆಯ ವ್ಯಾಪ್ತಿಯಲ್ಲಿರುವ ನಾಲ್ಕು ಘನೀಕೃತ ವೀರ್ಯ ಉತ್ಪಾದನಾ ಕೇಂದ್ರಗಳ ಮುಖಾಂತರ ಪೂರೈಸಲಾಗುತ್ತಿದೆ. ಈ ಕೇಂದ್ರಗಳಲ್ಲಿ ಒಟ್ಟು 224 ಹೋರಿಗಳನ್ನು ಸಾಕಲಾಗುತ್ತಿದ್ದು, ಇವುಗಳ ಆಯ್ಕೆಯ ಪ್ರಕ್ರಿಯೆಯು ಹೆಚ್ಚಿನ ಕಾಳಜಿಯಿಂದ ನಡೆಯುತ್ತಿದೆ.

ಇಲಾಖೆಯ ಜನಕ ಮೌಲ್ಯ ನಿರ್ಣಯ ಕೋಶ (SEC)ದ ಪ್ರಮುಖ ಕಾರ್ಯಗಳು ಈ ಕೆಳಕಂಡಂತಿವೆ:

1) ಹೋರಿ/ಕೋಣಗಳ ಗುಣಮಟ್ಟವನ್ನು ಮೌಲ್ಯಮಾಪನ ಮಾಡುವುದು.
   - ಆರ್ಥಿಕವಾಗಿ ಲಾಭದಾಯಕವಾಗಿರುವ ಹೈನು ರಾಸುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಉತ್ಪಾದಿಸಲು.
   - ಉತ್ಪಾದನೆ, ಸ್ಥಳೀಯ ಹವಾಗುಣಕ್ಕೆ ಸಹಿಷ್ಣುತೆ ಹಾಗೂ ಸ್ಥಳೀಯ ದುಡಿಮೆ ಅವಶ್ಯಕತೆಗಳನ್ನು ನೀಗಿಸುವ ಗುಣಗಳ ಸಂಯೋಗಕ್ಕೆ.
2) ವೀರ್ಯನಳಿಕೆಗಳನ್ನು ತಾಂತ್ರಿಕ ರೀತಿಯಲ್ಲಿ ಶೇಖರಣೆ ಮಾಡುವುದು.
3) ಸ್ಥಳೀಯ ತಳಿಗಳನ್ನು (germplasm) ಸಂರಕ್ಷಲು ಮತ್ತು ವೃದ್ಧಿಸಲು.
4) ವೀರ್ಯನಳಿಕೆಗಳನ್ನು ಎಲ್ಲಾ ಜಿಲ್ಲಾ ಕೇಂದ್ರಗಳಿಗೆ ವಿತರಿಸುವುದು.
5) ರಾಸುಗಳಲ್ಲಿ ವಿದೇಶಿ ತಳಿಗಳ ರಕ್ತ ಶೇ. 50% ಕ್ಕಿಂತ ಜಾಸ್ತಿಯಾಗದಂತೆ ಕಣ್ಗಾವಲಿಡುವುದು.
6) ಒಳತಳಿಯೆಬ್ಬಿಸುವಿಕೆಯನ್ನು ತಡೆಯುವುದು.

ನಾಟಿ ಹಸುಗಳನ್ನು (Nondescript cows) ಮೇಲ್ದರ್ಜೆಗೇರಿಸಲು ಹೆಚ್.ಎಫ್ ಹಾಗೂ ಜರ್ಸಿ ಹೋರಿಗಳನ್ನು ಬಳಸಲಾಗುತ್ತಿದೆ. ಸ್ಥಳೀಯ ಎಮ್ಮೆ ಸಂತತಿಯನ್ನು ಮೇಲ್ದರ್ಜೆಗೇರಿಸಲು ಸೂರ್ತಿ ಹಾಗೂ ಮುರ್ರಾ ತಳಿಗಳನ್ನು ಬಳಸಲಾಗುತ್ತಿದೆ ಹಾಗೆಯೇ ರಾಜ್ಯ ರೈತ ಸಮುದಾಯಕ್ಕೆ ಬೇಕಾಗಿರುವ ದುಡಿಮೆಯ ಸಾಮರ್ಥ್ಯವುಳ್ಳ (draught power) ರಾಸುಗಳನ್ನು ವರ್ಧಿಸಲು ಅಮೃತ್ ಮಹಲ್, ಹಳ್ಳಿಕಾರ್, ದೇವಣಿ ಮತ್ತು ಕಿಲ್ಲಾರ್ ತಳಿಗಳ ವೀರ್ಯಗಳನ್ನು ಬಳಸಲಾಗುತ್ತಿದೆ.

ಜನಕ ಮೌಲ್ಯ ನಿರ್ಣಯ ಕೋಶ ಕಚೇರಿಯಲ್ಲಿ ಘನಿಕೃತ ವೀರ್ಯ ಬ್ಯಾಂಕೊಂದನ್ನು ತೆರೆದಿದ್ದು, ಇಲ್ಲಿಂದ ರಾಜ್ಯದ ದಕ್ಷಿ ಜಿಲ್ಲೆಗಳಿಗೆ ಘನೀಕೃತ ವೀರ್ಯ ನಳಿಕೆಗಳನ್ನು ವಿತರಣೆ ಮಾಡಲಾಗುತ್ತಿದೆ. ಧಾರವಾಡ ಮತ್ತು ಮುನಿರಾಬಾದ್ ನಲ್ಲಿರುಂವ ವೀರ್ಯ ಉತ್ಪಾದನ ಕೇಂದ್ರಗಳು ರಾಜ್ಯದ ಉತ್ತರ ಜಿಲ್ಲೆಗಳ ಬೇಡಿಕೆಯನ್ನು ಪೂರೈಸುತ್ತಿವೆ. ಈ ವೀರ್ಯ ನಳಿಕೆಗಳನ್ನು ರೈತರಿಗೆ ಅವ ಕೈಗೆಟಕುವ ಬೆಲೆಯಲ್ಲಿ ಸಿಗುವಂತೆ ನೋಡಿಕೊಳ್ಳಲಾಗುತ್ತಿದೆ. ದಿನಾಂಕ: 01-10-1996 ರಿಂದ ಕೃತಕ ಗರ್ಭಧಾರಣೆಗಾ ಉಪಯೋಗಿಸಲಾಗುತ್ತಿರುವ ಪ್ರತಿಯೊಂದು ವೀರ್ಯನಳಿಕೆಗೆ ರೂ.5.00 ರಂತೆ ಶುಲ್ಕವನ್ನು ವಿಧಿಸಲಾಗುತ್ತಿದೆ.

ಜನಕ ಮೌಲ್ಯ ನಿರ್ಣಯ ಕೋಶ ಕಚೇರಿಯಲ್ಲಿ ಘನೀಕೃತ ವೀರ್ಯ ಬ್ಯಾಂಕಿನಿಂದ ಘನೀಕೃತ ವೀರ್ಯನಳಿಕೆಗಳನ್ನು ವಿತರಿಸುವಾ ಒಳ ತಳಿಗಳು ಏಳದಂತೆ ನೋಡಿಕೊಳ್ಳಲಾಗುತ್ತಿದೆ. ವೀರ್ಯ ಉತ್ಪಾದನಾ ಕೇಂದ್ರಗಳಿಂದ ಹಾಗೂ ವೀರ್ಯನಳಿಕೆಗಳನ್ನು ಪಡೆ ಜಿಲ್ಲೆಗಳಿಂದ ಅಗತ್ಯ ಮಾಹಿತಿಗಳನ್ನು ಪಡೆದು ಜನಕ ಮೌಲ್ಯ ನಿರ್ಣಯ ಕೋಶವು ಹೋರಿಗಳ ಉತ್ಪಾದನಾ ಗುಣಮಟ್ಟವನ್ನು ಮಾಪ ಮಾಡುತ್ತಿದೆ. ಈ ವರದಿಗಳನ್ನು ಕ್ರೋಢೀಕರಿಸಿ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಈ ಬಗ್ಗೆ ಅಗತ್ಯವಿರುವ ಅಂಕಿ ಅಂಶಗಳನ್ನು ಪ್ರತಿಬಿಂಬಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ.

ದಿನಾಂಕ:01.04.2009 ರಿಂದ 31.12.2009 ರವರೆಗೆ 22,80,855 ಘನೀಕೃತ ವೀರ್ಯನಳಿಕೆಗಳನ್ನು ವಿವಿಧ ಜಿಲ್ಲೆಗಳಿಗೆ ವಿತರಣೆ ಮಾಡಲಾಗಿದೆ. ರಾಜ್ಯದ ವಿವಿಧ ಕೇಂದ್ರಗಳಲ್ಲಿ ಈಗ (ದಿನಾಂಕ:31.12.2009 ರಲ್ಲಿ) 17,25,004 ಘನೀಕೃತ ವೀರ್ಯ ನಳಿಕೆಗಳ ದಾಸ್ತಾನು ಇರುತ್ತದೆ.

# 3. ಕುಕ್ಕುಟ ಅಭಿವೃದ್ಧಿ

ರಾಜ್ಯದಲ್ಲಿ ಕುಕ್ಕುಟ ಅಭಿವೃದ್ಧಿಯನ್ನು ಇಲಾಖೆಯ 24 ಸಂಸ್ಥೆಗಳಿಂದ ಮಾಡಲಾಗುತ್ತಿದೆ. ಇದಲ್ಲದೇ ಕರ್ನಾಟಕ ಕುಕ್ಕುಟ ಮತ್ತು ಪಶು ಆಹಾರಗಳ (ಉತ್ಪಾದನೆ ಮತ್ತು ಮಾರಾಟ ನಿಯಂತ್ರಣ) ಆಜ್ಞೆ 1988 ಹಾಗೂ ತಿದ್ದುಪಡಿ ಆಜ್ಞೆ 1991, 1992 ಜಾರಿಗೆ ತಂದು ಉತ್ತಮ ಮಟ್ಟದ ಕುಕ್ಕುಟ ಆಹಾರ ಸರಬರಾಜಿಗೆ ಕ್ರಮ ಕ್ರಮಕೈಗೊಳ್ಳಲಾಗುತ್ತಿದೆ. ಇದಲ್ಲದೇ ಕರ್ನಾಟಕ ಸಹಕಾರಿ ಕುಕ್ಕುಟ ಮಹಾ ಮಂಡಳಿ ವತಿಯಿಂದ ಸಹಕಾರ ಸಂಘಗಳನ್ನು ಸ್ಥಾಪಿಸಿ ಕುಕ್ಕುಟ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ.

## ಎ. ಇಲಾಖಾ ವತಿಯಿಂದ ಕುಕ್ಕುಟ ಅಭಿವೃದ್ಧಿ

ಈ ಕಾರ್ಯಕ್ರಮವನ್ನು 2009-10 ರ ಸಾಲಿನಲ್ಲಿ ಅನುಷ್ಠಾನಗೊಳಿಸಲು, ರೂ.286.36 ಲಕ್ಷಗಳು ಯೋಜನೇತರ ಕಾರ್ಯಕ್ರಮದಡಿಯಲ್ಲಿ (ವೇತನ ಸೇರಿ) ಹಂಚಿಕೆಯಾಗಿದೆ. ಈ ಸಂಸ್ಥೆಗಳ ವಿವರಗಳು ಈ ಕೆಳಕಂಡಂತಿವೆ.

⇒ 1 ರಾಜ್ಯ ಕುಕ್ಕುಟ ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಹೆಸರಘಟ್ಟ, ಬೆಂಗಳೂರು.

⇒ ಮಳವಳ್ಳಿ, ಗಂಗಾವತಿಯಲ್ಲಿರುವ 2 ಪ್ರಾದೇಶಿಕ ಕುಕ್ಕುಟ ಸಂವರ್ಧನಾ ಮತ್ತು ತರಬೇತಿ ಕೇಂದ್ರಗಳು.

⇒ ಗುಲ್ಬರ್ಗಾ, ದಾವಣಗೆರೆ, ಕೊಡಿಗೆ, ಬೀದರ್, ಬಿಜಾಪುರ, ಗುಂಡ್ಲುಪೇಟೆ, ಮಂಗಳೂರು ಮತ್ತು ಕೋಲಾರದಲ್ಲಿರುವ 8 ಜಿಲ್ಲಾ ಕುಕ್ಕುಟ ಸಾಕಣೆ ಮತ್ತು ತರಬೇತಿ ಕೇಂದ್ರಗಳು.

⇒ ತುಮಕೂರು, ಶಿವಮೊಗ್ಗ, ರಾಯಚೂರು, ಕುಮುಟ, ಕುಂದಾಪುರ, ಚಿಕ್ಕಮಗಳೂರು, ಪೊನ್ನಂಪೇಟೆ, ಹಾಸನ, ರಾಮನಗರ, ಟಿ.ನರಸೀಪುರ, ಹೊಳೆನರಸೀಪುರ, ಕೊಯ್ಲಾ ಮತ್ತು ಕುರಿಕುಪ್ಪೆಯಲ್ಲಿರುವ 13 ಕೋಳಿ ವಿಸ್ತರಣಾ ಕೇಂದ್ರಗಳು.

<u>ಕುಕ್ಕಟ ಅಭಿವೃದ್ಧಿಯ ಮುಖ್ಯವಾದ ಕಾರ್ಯ ಚಟುವಟಿಕೆಗಳು ಈ ಕೆಳಕಂಡಂತಿವೆ:</u>

- ಕರ್ನಾಟಕ ಪಶು ಮತ್ತು ಮೀನುಗಾರಿಕೆ ವಿಜ್ಞಾನ ವಿಶ್ವ ವಿದ್ಯಾನಿಲಯ, ವೆಟರಿನರಿ ಕಾಲೇಜು,ಬೆಂಗಳೂರು ಇವರ ಸಹಯೋಗದಿಂದ ಪಡೆದ ಗಿರಿರಾಜ ಮಾತೃ ಕೋಳಿಗಳನ್ನು ವೈಜ್ಞಾನಿಕ ರೀತಿಯ ಸಂವರ್ಧನೆಯಲ್ಲಿ ಸಾಕುವುದು.
- ಒಂದು ದಿನದ ಗಿರಿರಾಜ ಕೋಳಿ ಮರಿಗಳನ್ನು ಉತ್ಪಾದಿಸಿ ಅವುಗಳನ್ನು ರೈತರಿಗೆ ಮತ್ತು ಇಲಾಖೆಯ ಸಾಕಣೆ ಕ್ಷೇತ್ರಗಳಿಗೆ ಸರಬರಾಜು ಮಾಡುವುದು.
- ಗಿರಿರಾಜ ಮರಿಗಳನ್ನು 8 ವಾರಗಳವರೆಗೆ ಸಾಕಿ ಆರ್ಥಿಕ ಮತ್ತು ಸಾಮಾಜಿಕ ಯೋಜನೆಗಳಡಿಯಲ್ಲಿ ಬರುವ ಫಲಾನುಭವಿಗಳಿಗೆ ಸಾಕಲು ನೀಡುವುದು.
- ಆಸಕ್ತ ರೈತರಿಗೆ ಆಧುನಿಕ ಮೊಟ್ಟೆ ಕೋಳಿ ಸಾಕಾಣಿಕೆ ಮತ್ತು ಮಾಂಸದ ಕೋಳಿಗಳ ಸಾಕಾಣಿಕೆಯ ಬಗ್ಗೆ ತರಬೇತಿ ನೀಡುವುದು ಮತ್ತು ಯೋಜನಾ ವರದಿಗಳನ್ನು ತಯಾರಿಸುವುದು.

ದಿನಾಂಕ:1-4-2009 ರಿಂದ 31-12-2009 ರವರೆಗೆಸಾಧಿಸಿದ ಪ್ರಗತಿ

| | | |
|---|---|---|
| 1 | ಗಿರಿರಾಜ ಮೊಟ್ಟೆ ಉತ್ಪಾದನೆ | 2,45,990 |
| 2 | ಗಿರಿರಾಜ ಮರಿಗಳ ಉತ್ಪಾದನೆ | 80,771 |
| 3 | ರೈತರಿಗೆ ತರಬೇತಿ ನೀಡಿರುವುದು | 1,464 |

1. ಪ್ರಾದೇಶಿಕ ಕುಕ್ಕುಟ ಸಂವರ್ಧನೆ ಮತ್ತು ತರಬೇತಿ ಕೇಂದ್ರ, ಮಳವಳ್ಳಿ ಕ್ಷೇತ್ರದಲ್ಲಿ ಸದರಿ ಯೋಜನೆ ಅಡಿಯಲ್ಲಿ 2004-05 ನೇ ಸಾಲಿನಲ್ಲಿ ರೂ.69.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಅದರಲ್ಲಿ ಕೇಂದ್ರದ ಪಾಲು ಶೇ.80.00 ರಂತೆ ರೂ. 55.00 ಲಕ್ಷ ಹಾಗೂ ರಾಜ್ಯದ ಪಾಲು ಶೇ.20 ರಂತೆ ರೂ.14.00 ಲಕ್ಷ ಬಿಡುಗಡೆಯಾಗಿದ್ದು, ಕ್ಷೇತ್ರದ ಮೂಲ ಸೌಕರ್ಯಗಳ ಬಲವರ್ಧನೆ ಸೇರಿದಂತೆ 4000 ಗಿರಿರಾಜ ಮಾತೃ ಕೋಳಿಗಳ ಸಾಕಾಣಿಕೆ ಮತ್ತು ರೈತರಿಗೆ ತರಬೇತಿ ಮುಂತಾದ ಕಾರ್ಯಕ್ರಮಗಳು ಪ್ರಸ್ತುತ ಅನುಷ್ಠಾನದಲ್ಲಿವೆ.

2. ಕೇಂದ್ರ ಪುರಸ್ಕೃತ ಯೋಜನೆ ರಾಜ್ಯ ಕುಕ್ಕುಟ ಕ್ಷೇತ್ರಗಳಿಗೆ ನೆರವು ಯೋಜನೆ ಅಡಿಯಲ್ಲಿ 2006-07ನೇ ಸಾಲಿನಲ್ಲಿ ರಾಜ್ಯ ಕುಕ್ಕುಟ ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಹೆಸರಘಟ್ಟ, ಬೆಂಗಳೂರು ಮತ್ತು ಪ್ರಾದೇಶಿಕ ಕುಕ್ಕುಟ ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಗಂಗಾವತಿ ಕ್ಷೇತ್ರಗಳಿಗೆ ಒಟ್ಟು ರೂ.85.00 ಲಕ್ಷಗಳಂತೆ ಒಟ್ಟು ರೂ.170.00 ಲಕ್ಷಗಳನ್ನು (ಕೇಂದ್ರದ ಪಾಲು ಶೇ.80 ರಂತೆ ಮತ್ತು ರಾಜ್ಯದ ಪಾಲು ಶೇ.20 ರಂತೆ) ಸಲ್ಲಿಸಿದ್ದ ಪ್ರಸ್ತಾವನೆಗೆ ಭಾರತ ಸರ್ಕಾರವು ಅನುಮೋದನೆ ನೀಡಿದ್ದು, 2007-08 ನೇ ಸಾಲಿನಲ್ಲಿ ಬಳಕೆ ಮಾಡಲು ರಾಜ್ಯ ಸರ್ಕಾರವು ಸದರಿ ಮೊತ್ತಕ್ಕೆ ಮಂಜೂರಾತಿ ನೀಡಿದೆ. ಸದರಿ ಕ್ಷೇತ್ರಗಳ ಮೂಲಭೂತ ಸೌಕರ್ಯಗಳ ಕಾರ್ಯವು ಪ್ರಸ್ತುತ ಪ್ರಗತಿಯಲ್ಲಿದೆ. 2008-09 ನೇ ಸಾಲಿನಲ್ಲಿ ಜಿಲ್ಲಾ ಕೋಳಿ ಸಾಕಾಣಿಕೆ ಮತ್ತು ತರಬೇತಿ ಕೇಂದ್ರ ಗುಂಡ್ಲುಪೇಟೆ ಕ್ಷೇತ್ರಕ್ಕೆ ಇದೇ ಯೋಜನೆ ಅಡಿಯಲ್ಲಿ ರೂ.85.00 ಲಕ್ಷಗಳ ವಂಟನ ಬಿಡುಗಡೆಗೆ ಸಲ್ಲಿಸಲಾಗಿದ್ದ ಪ್ರಸ್ತಾವನೆಗೆ ಭಾರತ ಸರ್ಕಾರದಿಂದ ಅನುಮೋದನೆ ದೊರೆತಿದ್ದು, ಅದರಲ್ಲಿ ಬಿಡುಗಡೆಯಾಗಿರುವ ಮೊದಲನೆ ಕಂತಿನಲ್ಲಿ ಸದರಿ ಕ್ಷೇತ್ರದ ಮೂಲಭೂತ ಸೌಕರ್ಯಗಳ ಕಾರ್ಯಕ್ರಮಗಳು ಪ್ರಸ್ತುತ ಪ್ರಗತಿಯಲ್ಲಿರುತ್ತವೆ.

3. 2009-10 ನೇ ಸಾಲಿಗೆ ಕೇಂದ್ರ ಪುರಸ್ಕೃತ ಯೋಜನೆ – ಕುಕ್ಕುಟ ಕ್ಷೇತ್ರಗಳಿಗೆ ನೆರವು ಅಡಿಯಲ್ಲಿ ಪ್ರಾದೇಶಿಕ ಪ್ರಯೋಗ ಶಾಲೆ, ಬಂಗಾರಪೇಟೆ, ಕೋಲಾರ ಜಿಲ್ಲೆಗೆ ರೂ.85.00 ಮತ್ತು ಜಿಲ್ಲಾ ಕೋಳಿ ಸಾಕಾಣಿಕೆ ಮತ್ತು ತರಬೇತಿ ಕೇಂದ್ರ, ಕೂಡಿಗೆ, ಕೊಡಗು ಜಿಲ್ಲೆಗೆ ರೂ.73.00 ಲಕ್ಷಗಳ (ಕೇಂದ್ರ ಮತ್ತು ರಾಜ್ಯದ ಅನುಪಾತ 80:20 ರೀತ್ಯಾ) ಒಟ್ಟು ರೂ.158.00 ಲಕ್ಷಗಳ ಅನುದಾನ ಕೋರಿ ಸಲ್ಲಿಸಿದ್ದ ಪ್ರಸ್ತಾವನೆಗೆ ಕೇಂದ್ರ ಸರ್ಕಾರವು ಅನುಮೋದನೆ ನೀಡಿದ್ದು, ಮೊದಲನೇ ಕಂತಾಗಿ 2009-10 ನೇ ಸಾಲಿನಲ್ಲಿ ಸದರಿ ಕ್ಷೇತ್ರಗಳ ಮೂಲಭೂತ ಸೌಕರ್ಯಗಳ ಬಲವರ್ಧನೆಗಾಗಿ ರಾಜ್ಯ ಸರ್ಕಾರವು ಕ್ರಮವಾಗಿ ರೂ.42.50 ಲಕ್ಷಗಳನ್ನು ಬಂಗಾರಪೇಟೆ ಕ್ಷೇತ್ರಕ್ಕೆ ಮತ್ತು ರೂ.36.50 ಲಕ್ಷಗಳನ್ನು ಕೂಡಿಗೆ ಕ್ಷೇತ್ರಕ್ಕೆ ಬಿಡುಗಡೆ ಮಾಡಿದ್ದು, ಸದರಿ ಕಾರ್ಯಕ್ರಮದ ಅನುಷ್ಠಾನವು ಪ್ರಸ್ತುತ ಪ್ರಗತಿಯಲ್ಲಿರುತ್ತದೆ.

ಪುಟ - 17

## ಬಿ. ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳಿ (ನಿ), ಬೆಂಗಳೂರು

ಕರ್ನಾಟಕ ಸಹಕಾರ ಕುಕ್ಕುಟ ಮಹಾ ಮಂಡಳಿಯು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959, ಸುಮ 1960 ರಡಿ ನೊಂದಣಿ ಸಂಖ್ಯೆ:ಓಟಿಎಸ್:144/ಹೆಚ್‌ಓಟಿ/94-95, ದಿನಾಂಕ:15-3-1995 ರಂದು ನೊಂದಾಯಿಸಲ್ಪಟ್ಟಿದೆ.

**ಮಂಡಳಿಯ ಉದ್ದೇಶಗಳು:**

- ಗ್ರಾಮೀಣ ನಿರುದ್ಯೋಗಿ ಯುವಕ- ಯುವತಿಯರಿಗೆ ಉದ್ಯೋಗಾವಕಾಶವನ್ನು ಕಲ್ಪಿಸುವ ದಿಸೆಯಲ್ಲಿ ಕರ್ನಾಟಕ ರಾಜ್ಯ ವ್ಯಾಪ್ತಿಯಲ್ಲಿ ಪ್ರಾಥಮಿಕ ಕುಕ್ಕುಟ ಸಹಕಾರ ಸಂಘಗಳ ಸ್ಥಾಪನೆ ಹಾಗೂ ಅವುಗಳ ಬಲವರ್ಧನೆ.
- ವಿಸ್ತರಣಾ ಕಾರ್ಯಕ್ರಮದಡಿ ಆಧುನಿಕ ತಂತ್ರಜ್ಞಾನದನ್ವಯ ಕೋಳಿ ಸಾಕಾಣಿಕೆ ಕುರಿತು ರೈತರಿಗೆ ತರಬೇತಿ ನೀಡುವುದು ಹಾಗೂ ಕೋಳಿ ಉತ್ಪನ್ನಗಳಾದ ತತ್ತಿ ಮತ್ತು ಮಾಂಸವನ್ನು ಆಹಾರವಾಗಿ ಸೇವಿಸುವಲ್ಲಿ ಪ್ರೋತ್ಸಾಹಿಸುವುದು.
- ಕೋಳಿ ರೋಗಗಳ ಪರಿವೀಕ್ಷಣೆ ಹಾಗೂ ನಿಯಂತ್ರಣ ಇಲಾಖೆ ಅಧಿಕಾರಿಗಳೊಂದಿಗೆ ಕೈಗೊಳ್ಳುವುದು.
- ವಿವಿಧ ಇಲಾಖಾ ಹಾಗೂ ಸರ್ಕಾರದ ಯೋಜನೆಗಳಿಗೆ ಗಿರಿರಾಜ ಕೋಳಿ ಮರಿಗಳ ಸಾಕಾಣಿಕೆ ಹಾಗೂ ಮಾರಾಟ.
- ಕರ್ನಾಟಕ ಸರ್ಕಾರವು ಕೋಳಿ ಶೀತ ಜ್ವರ ಕಣ್ಗಾವಲಿಗಾಗಿ ಪ್ರಾಣಿಜನ್ಯ ರೋಗಗಳ ತುರ್ತು ನಿರ್ವಹಣಾ ಸಮಿತಿಯನ್ನು ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ರಚಿಸಿದ್ದು, ಸಭೆ ಜರುಗಿಸುವುದರೊಂದಿಗೆ ಸಾರ್ವಜನಿಕರಿಗೆ ಅರಿವು ಹಾಗೂ ಮಾಹಿತಿ ನೀಡುವುದು ಹಾಗೂ ಇಲಾಖೆ ಅಧಿಕಾರಿಗಳಿಗೆ ಸದರಿ ವಿಷಯದಲ್ಲಿ ಸಹಕಾರವನ್ನು ನೀಡುವುದು.
- ಕೇಂದ್ರ ಪುರಸ್ಕೃತ ಕಾರ್ಯಕ್ರಮವಾದ ಕುಕ್ಕುಟ ಉದ್ಯಮಕ್ಕಾಗಿ ಬಂಡವಾಳ ಹೂಡಿಕೆ ನಿಧಿ ಕಾರ್ಯಕ್ರಮದ ರೂಪುರೇಷೆಗಳನ್ವಯ ಆಸಕ್ತ ರೈತರು ವಾಣಿಜ್ಯ ಬ್ಯಾಂಕುಗಳಿಂದ ರೈತರಿಗೆ ಕೋಳಿ ಸಾಕಾಣಿಕೆಗೆ ಸಾಲವನ್ನು ನೀಡಿ ಶೇ.25% ಸಹಾಯ ಧನ ಸಾಮಾನ್ಯ ವರ್ಗದವರಿಗೆ ಹಾಗೂ ಶೇ.33.33% ಪರಿಶಿಷ್ಟ ಜಾತಿ/ಪಂಗಡದವರಿಗೆ ಸವಲತ್ತನ್ನು ಪಡೆದುಕೊಳ್ಳಲು ಮಾಹಿತಿಯನ್ನು ನೀಡುವುದು.

ಕರ್ನಾಟಕ ಸಹಕಾರ ಕುಕ್ಕುಟ ಮಹಾ ಮಂಡಳಿಯು ಸಹಕಾರಿ ಸಂಸ್ಥೆಯಾಗಿದ್ದು, ಇದರಲ್ಲಿ 18 ಮಂದಿ ಆಡಳಿತ ನಿರ್ದೇಶಕರುಗಗಳಿರುವರು. ಆದರೆ ಹಾಲಿ ಆಡಳಿತ ಮಂಡಳಿಯಲ್ಲಿ 12 ನಿರ್ದೇಶಕರುಗಳು ಇರುವರು.

| ಸಿಬ್ಬಂದಿ ವಿವರ:- | |
|---|---|
| ಮಂಜೂರಾದ ಒಟ್ಟು ಹುದ್ದೆಗಳ ಸಂಖ್ಯೆ | 52 |
| ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ | 43 |
| ಖಾಲಿಯಿರುವ ಹುದ್ದೆಗಳ ಸಂಖ್ಯೆ | 09 |

ಪ್ರಸ್ತುತ ಮಂಡಳಿಯಲ್ಲಿ 74 ಪ್ರಾಥಮಿಕ ಕುಕ್ಕುಟ ಸಹಕಾರ ಸಂಘಗಳು ಸಂಯೋಜಿಸಲ್ಪಟ್ಟಿದೆ.

2009-10 ನೇ ಸಾಲಿಗೆ ಯೋಜನಾ ಕಾರ್ಯಕ್ರಮಗಳಿಗಾಗಿ ರೂ. 20.00 ಲಕ್ಷ (ರೈತರಿಗೆ ಕೋಳಿ ಸಾಕಾಣಿಕೆ ಬಗ್ಗೆ ಅಲ್ಪಾವಧಿ ತರಬೇತಿ ಹಾಗೂ ಗಿರಿರಾಜ ಕೋಳಿ ಮರಿಗಳ ಸಾಕಾಣಿಕೆ ಮತ್ತು ಮಾರಾಟ ಕಾರ್ಯಕ್ರಮ) ಹಾಗೂ ಯೋಜನೇತರ ಕಾರ್ಯಕ್ರಮಗಳಿಗಾಗಿ ರೂ. 87.38 ಲಕ್ಷ ಮಂಜೂರಾಗಿರುತ್ತದೆ (ಯೋಜನೇತರ ವಂಟನವನ್ನು ಮಂಡಳಿಯ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರ ವೇತನ ಹಾಗೂ ಇತರೆ ಭತ್ಯೆಗಳಿಗೆ ಭರಿಸಲಾಗುತ್ತಿದೆ).

**ಮಂಡಳಿಗೆ ಮಂಜೂರಾದ ಹೊಸ ಯೋಜನೆ ಕುರಿತು (ಆರ್. ಕೆ. ವಿ. ವೈ ಮತ್ತು ಕುಕ್ಕುಟ ಕ್ಷೇತ್ರ ಸ್ಥಾಪನೆಗಾಗಿ ನೆರವು)**

**ಅ. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ:**

ಕೇಂದ್ರ ಸರ್ಕಾರದ ಕಾರ್ಯಕ್ರಮವಾದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಕುಕ್ಕುಟ ಅಭಿವೃದ್ಧಿಗಾಗಿ ಮಂಡಳಿಯ ಪ್ರಾದೇಶಿಕ ಕೇಂದ್ರಗಳನ್ನು ಬಲವರ್ಧನೆಗೊಳಿಸಿ, ಗಿರಿರಾಜ ಕೋಳಿಗಳನ್ನು ರೈತರಿಗೆ ಸರಬರಾಜು ಮಾಡಿ ಮೊಟ್ಟೆ ಮತ್ತು ಮಾಂಸದ ಕೋಳಿ ಸಾಕಾಣಿಕೆ ಮಾಡುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಾಣಿಕೆ ಮಾಡಲು ಶೀತಲ ಸರಪಳಿ ವಾಹನಗಳನ್ನು ಬಳಸಲಾಗುವುದು. ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯ ಒದಗಿಸುವ ಹಿನ್ನೆಲೆಯಲ್ಲಿ ತಾಲ್ಲೂಕಿಗೆ ಎರಡರಂತೆ ಕೋಳಿ ಮತ್ತು ಮೊಟ್ಟೆ ಮಾರಾಟ ಮಳಿಗೆಗಳನ್ನು ಸ್ಥಾಪಿಸಲು ಯೋಜಿಸಿದ್ದು ಹಾಗೂ ಪ್ರಯೋಗಾಲಯ, ಫೀಡ್ ಮಿಕ್ಸಿಂಗ್, ಕೋಲ್ಡ್ ಸ್ಟೋರೇಜ್ ಮತ್ತು ಗೋಧಾಮುಗಳನ್ನು ಸ್ಥಾಪಿಸಲಾಗುವುದು. ಈ ಎಲ್ಲಾ ಕಾರ್ಯಕ್ರಮಗಳಿಗೆ ಒಟ್ಟು ರೂ.2795.93 ಲಕ್ಷಗಳ ಯೋಜನಾ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರದಿಂದ ಮಂಜೂರಾತಿ ದೊರೆತಿದೆ.

**ಆ. ಕುಕ್ಕುಟ ಕ್ಷೇತ್ರಗಳನ್ನು ಪ್ರಾರಂಭಿಸಲು ಸಹಾಯಧನ:**

ಮಾನ್ಯ ಮುಖ್ಯಮಂತ್ರಿಗಳು ಹಾಗೂ ಆರ್ಥಿಕ ಸಚಿವರು ತಮ್ಮ ಆಯವ್ಯಯ ಭಾಷಣದಲ್ಲಿ ಕುಕ್ಕುಟ ಹಾಗೂ ಕುರಿ ಅಭಿವೃದ್ಧಿಗಾಗಿ ರೂ.10.00 ಕೋಟಿಗಳನ್ನು ನಿಗದಿಪಡಿಸಿದ್ದು, ಈ ಮಂಡಳಿವತಿಯಿಂದ ಕುಕ್ಕುಟ ಅಭಿವೃದ್ಧಿ ಕಾರ್ಯಕಮವಾಗಿ ತಾಲ್ಲೂಕಿಗೆ ತಲಾ 50 ಬ್ರಾಯ್ಲರ್ ಕೋಳಿ ಫಾರಂಗಳನ್ನು 88 ತಾಲ್ಲೂಕುಗಳಲ್ಲಿ ಸ್ಥಾಪಿಸುವ ಕುರಿತು ಸರ್ಕಾರದಿಂದ ರೂ.200.00 ಲಕ್ಷ ಬಿಡುಗಡೆಯಾಗಿದ್ದು 2000 ಬ್ರಾಯ್ಲರ್ ಕೋಳಿ ಫಾರಂಗಳನ್ನು ಸ್ಥಾಪಿಸಲು ಕ್ರಮಕೈಗೊಳ್ಳಲಾಗಿದೆ.

**ಪಟ್ಟಿ–18**

**ಆರ್ಥಿಕ ಪ್ರಗತಿ**

**(1-4-2009 ರಿಂದ 31-12-2009 ರವರೆಗೆ)**

ಅನುದಾನ (ರೂ. ಲಕ್ಷಗಳಲ್ಲಿ)

| ವರ್ಷ | ಯೋಜನೆ | | | ಯೋಜನೇತರ | | |
|---|---|---|---|---|---|---|
| | ಮಂಜೂರಾದ ಮೊತ್ತ | ಬಿಡುಗಡೆಯಾದ ಮೊತ್ತ | ವೆಚ್ಚ | ಮಂಜೂರಾದ ಮೊತ್ತ | ಬಿಡುಗಡೆಯಾದ ಮೊತ್ತ | ವೆಚ್ಚ |
| 2009-10 (ಡಿಸೆಂಬರ್ 2009 ರ ಅಂತ್ಯದವರೆಗೆ) | 20.00 | 10.00 | 10.32 | 87.38 | 43.70 | 43.70 |



ಗಿರಿರಾಜ ಕೋಳಿಗಳು



ಬ್ರಾಯ್ಲರ್ ಕೋಳಿಗಳು

# 4. ಕುರಿ ಮತ್ತು ಉಣ್ಣೆ ಅಭಿವೃದ್ಧಿ

ಕುರಿ ಮತ್ತು ಉಣ್ಣೆ ಅಬಿವೃದ್ಧಿಗಾಗಿ ಇಲಾಖೆಯ ಹಾಗೂ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದ ಮೂಲಕ ಹಲವಾರು ಕ್ರಮಗಳನ್ನು ಕೈಗೊಂಡಿರುತ್ತದೆ.

## ಎ. ಇಲಾಖಾವತಿಯಿಂದ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಕಾರ್ಯಕ್ರಮಗಳು

ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಕುರಿಕುಪ್ಪೆ ಕ್ಷೇತ್ರವು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಡಿ (ರಾಜ್ಯ ವಲಯ ಯೋಜನೆಯಲ್ಲಿ) ಕಾರ್ಯ ನಿರ್ವಹಿಸುತ್ತಿದ್ದು, ಈ ಕ್ಷೇತ್ರದಲ್ಲಿ ಜಮುನಾಪುರಿ ಮತ್ತು ನಂದಿದುರ್ಗ ಮಿಶ್ರತಳಿ ಮೇಕೆಗಳು, ರ್‍ಯಾಂಬುಲೆಟ್ ಮತ್ತು ಸ್ಥಳೀಯ ಕುರಿಗಳನ್ನು ಸಾಕಲಾಗುತ್ತಿದ್ದು, ಅವುಗಳಿಂದ ಮಿಶ್ರ ತಳಿ ಮೇಕೆ ಮತ್ತು ಮಿಶ್ರ ತಳಿ ಕುರಿಗಳನ್ನು ಉತ್ಪಾದಿಸಿ ರೈತರಿಗೆ ತಳಿ ಅಭಿವೃದ್ಧಿಗಾಗಿ ಸರ್ಕಾರ ನಿಗಧಿಪಡಿಸಿದ ಬೆಲೆಯಲ್ಲಿ ನೀಡಲಾಗುತ್ತಿದೆ. ಈ ಕ್ಷೇತ್ರದ ದಿನಾಂಕ: 1-4-2009 ರಿಂದ 31-12-2009 ರವರೆಗೆ ಸಾಧಿಸಿದ ಪ್ರಗತಿಯನ್ನು ಪಟ್ಟಿ-23ರಲ್ಲಿ ಕಾಣಿಸಿದೆ.

### ಪಟ್ಟಿ-23
ದಿನಾಂಕ: 1-4-2009 ರಿಂದ 31-12-2009 ರವರೆಗೆ ಸಾಧಿಸಿದ ಪ್ರಗತಿ

| ಕ್ರ.ಸಂ. | ಕಾರ್ಯಕ್ರಮಗಳು | ಸಾಧನೆ |
|---|---|---|
| 1 | ರ್‍ಯಾಂಬುಲೆಟ್ ಟಗರುಗಳು | 5 |
| 2 | ಮಿಶ್ರತಳಿ ಕುರಿಗಳು | 202 |
| 3 | ಜಮುನಾ ಪ್ಯಾರಿ ಮತ್ತು ನಂದಿದುರ್ಗ ಮಿಶ್ರತಳಿ | 196 |
| 4 | ರೈತರಿಗೆ ತಳಿ ಅಭಿವೃದ್ಧಿಗಾಗಿ ಮಾರಾಟ ಮಾಡಿದ ಮಿಶ್ರ ತಳಿ ಟಗರು ಮತ್ತು ಹೋತ ಸಂಖ್ಯೆ | ಟಗರು 69<br>ಹೋತ 88<br>ಒಟ್ಟು **157** |
| 5 | ಈ ಕ್ಷೇತ್ರದ ಪ್ರತ್ಯಕ್ಷ ಆದಾಯ 31-12-2009 ರವರೆಗೆ (ದಿ:1-4-09 ರಿಂದ 31-12-09 ರವರೆಗೆ) | 2,34,940 |
| 6 | ದಿನಾಂಕ: 31-12-2009 ರಿಂದ ಪರೋಕ್ಷ ಆದಾಯ | 3,05,373 |
| 7 | ಆಡು ಮತ್ತು ಕುರಿ ಸಾಕಾಣಿಕೆಯಲ್ಲಿ ತರಬೇತಿ ಪಡೆದ ರೈತರ ಸಂಖ್ಯೆ | 187 |

ಮಿಶ್ರತಳಿ ಹೋತ ಮತ್ತು ಆಡುಗಳನ್ನು ಹಾಗೂ ಮಿಶ್ರತಳಿ ಟಗರುಗಳನ್ನು ರೈತರಿಗೆ ಸರ್ಕಾರ ನಿಗಧಿ ಮಾಡಿದ ಬೆಲೆಯಲ್ಲಿ ತಳಿ ಅಭಿವೃದ್ಧಿಗೆ ಮಾರಾಟ ಮಾಡಲಾಗುವುದು.



ರ್‍ಯಾಂಬುಲೆಟ್ ಟಗರು



ಬನ್ನೂರು ಕುರಿ

# 5. ಕ್ಷೀರಾಭಿವೃದ್ಧಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಸೋದರಿ ಸಂಸ್ಥೆಯಾದ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿ, ನಿಯಮಿತ ವತಿಯಿಂದ ರಾಜ್ಯದಲ್ಲಿ ಕ್ಷೀರ ಕ್ರಾಂತಿ ಉಂಟು ಮಾಡಿದ್ದು, ಕೇಂದ್ರ ಸರ್ಕಾರದ ಹಾಲು ಮತ್ತು ಹಾಲು ಉತ್ಪನ್ನಗಳ ಆಜ್ಞೆ-92 ಕಾಯ್ದೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸುವ ಹೊಣೆ ಇರುತ್ತದೆ. 2008-09 ನೇ ಸಾಲಿನಲ್ಲಿ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ ರೂ.2/- ರಂತೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದ್ದು, ಸದರಿ ಯೋಜನೆಯನ್ನು ಪ್ರಸಕ್ತ ಸಾಲಿನಲ್ಲಿಯೂ ಸಹ ಮುಂದುವರಿಸಲಾಗಿದೆ.

## ಎ. ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿ, ನಿಯಮಿತ

ಕರ್ನಾಟಕ ರಾಜ್ಯದಲ್ಲಿ ಮೂರು ದಶಕಗಳ ಹಿಂದೆ ಹೈನುಗಾರಿಕೆಗೆ ಹೊಸರೂಪ ನೀಡಲು ಪ್ರಾರಂಭವಾದ ಹೈನು ಅಭಿವೃದ್ಧಿ ಯೋಜನೆಗಳು ಮೂರು ಹಂತಗಳಲ್ಲಿ ಅನುಷ್ಠಾನಗೊಂಡು ಇಂದು ರಾಜ್ಯದಾದ್ಯಂತ ವಿಸ್ತರಿಸಿ 13 ಜಿಲ್ಲಾ ಹಾಲು ಒಕ್ಕೂಟಗಳ ಮುಖಾಂತರ ಅಸಂಖ್ಯಾತ ಹೈನುಗಾರರ ಬಾಳಿಗೆ ಮಾರ್ಗದರ್ಶಿಯಾಗಿ ಕರ್ನಾಟಕ ಹಾಲು ಮಹಾಮಂಡಳಿ ಕಾರ್ಯ ನಿರ್ವಹಿಸುತ್ತಿದೆ.

**ಹಿನ್ನೆಲೆ:**

⇒ ವಿಶ್ವ ಬ್ಯಾಂಕ್ ಸಹಯೋಗದೊಂದಿಗೆ 1975 ರಲ್ಲಿ ಪ್ರಥಮ ಹೈನು ಅಭಿವೃದ್ಧಿ ಯೋಜನೆಯನ್ನು 8 ಜಿಲ್ಲೆಗಳ ವ್ಯಾಪ್ತಿಯಲ್ಲಿ ಸಹಕಾರಿ ತತ್ವದ ಆಧಾರದ ಮೇಲೆ 4 ಜಿಲ್ಲಾ ಮಟ್ಟದ ಹಾಲು ಒಕ್ಕೂಟಗಳ ಮೂಲಕ ಜಾರಿಗೆ ತರಲು ಕರ್ನಾಟಕ ಹೈನು ಅಬಿವೃದ್ಧಿ ನಿಗಮ (KDDC) ವನ್ನು ಸ್ಥಾಪಿಸಲಾಯಿತು.

⇒ 1984 ರಲ್ಲಿ ಕರ್ನಾಟಕ ಹಾಲು ಮಹಾ ಮಂಡಳಿಯು ಸ್ಥಾಪನೆಯಾಗಿ ಹೈನು ಚಟುವಟಿಕೆಯನ್ನು ಕ್ಷೀರಧಾರ-II ರ ಅಡಿಯಲ್ಲಿ ರಾಜ್ಯಾದ್ಯಂತ 13 ಜಿಲ್ಲಾ ಹಾಲು ಒಕ್ಕೂಟಗಳ ಮೂಲಕ ವಿಸ್ತರಿಸಲಾಗಿದ್ದು, 1996 ರಲ್ಲಿ ಕ್ಷೀರಧಾರೆ-III ಅಡಿಯಲ್ಲಿ ಅಭಿವೃದ್ಧಿ ಚಟುವಟಿಕೆಗಳನ್ನು 1996ರಲ್ಲಿ ಕ್ಷೀರಧಾರೆ-III ಅಂತ್ಯಗೊಂಡು ಕ್ಷೀರಧಾರೋತ್ತರ ಮತ್ತು ದೂರಗಾಮಿ ಯೋಜನೆಗಳನ್ನು ಎನ್.ಡಿ.ಡಿ.ಬಿ. ಸಹಯೋಗದೊಂದಿಗೆ ಮುಂದುವರೆಸಲಾಗುತ್ತಿದೆ.

**ಧ್ಯೇಯೋದ್ದೇಶಗಳು:**

⇒ ಡೈರಿ ಚಟುವಟಿಕೆಗಳನ್ನು ನಿರ್ವಹಿಸಲು ಸಹಕಾರಿ ವಲಯದಲ್ಲಿ ಗ್ರಾಮಮಟ್ಟದ ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರಿ ಸಂಘಗಳನ್ನು ಸ್ಥಾಪಿಸುವುದು.

⇒ ರೈತ ಸದಸ್ಯರು ಉತ್ಪಾದಿಸುವ ಹಾಲಿಗೆ ನಿಗದಿತ ಮತ್ತು ಪ್ರತಿಫಲದಾಯಕ ಮಾರುಕಟ್ಟೆಯನ್ನು ನಿರಂತರವಾಗಿ ಒದಗಿಸುವುದು.

⇒ ಗ್ರಾಹಕರಿಗೆ ಉತ್ತಮ ಗುಣಮಟ್ಟದ ಹಾಲು ಮತ್ತು ಹಾಲು ಉತ್ಪನ್ನಗಳನ್ನು ಒದಗಿಸುವುದು.

⇒ ಹಾಲು ಉತ್ಪಾದನೆಯನ್ನು ಅಧಿಕಗೊಳಿಸಲು ತಾಂತ್ರಿಕ ಸೌಲಭ್ಯ ಹಾಗೂ ಸಂಸ್ಕರಣಾ ಸೌಲಭ್ಯಗಳನ್ನು ಒದಗಿಸುವುದು.

⇒ ಗ್ರಾಮಮಟ್ಟದಲ್ಲಿ ಸ್ವಯಂ ಉದ್ಯೋಗ, ಸಾಮಾಜಿಕ ಮತ್ತು ಆರ್ಥಿಕ ಕ್ರಾಂತಿಯನ್ನು ಸಾಕಾರಗೊಳಿಸುವುದು.

ಸ್ವಾಮ್ಯದಲ್ಲಿರುವ ಹಾಲು ಒಕ್ಕೂಟಗಳು:

ಮಹಾಮಂಡಳಿಯ ವ್ಯಾಪ್ತಿಯಲ್ಲಿ 13 ಹಾಲು ಒಕ್ಕೂಟಗಳು ಕಾರ್ಯ ನಿರ್ವಹಿಸುತ್ತಿವೆ. ಅವುಗಳೆಂದರೆ, ಬೆಂಗಳೂರು, ಮೈಸೂರು, ತುಮಕೂರು, ಹಾಸನ, ಮಂಡ್ಯ, ಕೋಲಾರ, ಧಾರವಾಡ, ಬೆಳಗಾವಿ, ಬಿಜಾಪುರ, ಬಳ್ಳಾರಿ, ಗುಲ್ಬರ್ಗಾ, ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಹಾಲು ಒಕ್ಕೂಟಗಳು.

ಕರ್ನಾಟಕ ಹಾಲು ಮಂಡಳಿಯ ಘಟಕಗಳು:

ಕೇಂದ್ರೀಕೃತ ತಾಂತ್ರಿಕ ಸೇವಾ ಸೌಲಭ್ಯ ಪೂರೈಕೆಗಾಗಿ ಕೆಳಕಂಡ ಕಹಾಮ ಘಟಕಗಳು ಕಾರ್ಯನಿರತವಾಗಿವೆ:

1. ಮಾತೃ ಡೇರಿ, ಯಲಹಂಕ (ಐಸ್ ಕ್ರೀಂ ಮತ್ತು ಹಾಲಿನ ಪುಡಿ ಪ್ಲಾಂಟ್‌ಗಳನ್ನೊಳಗೊಂಡಂತೆ)
2. ನಂದಿನಿ ಮಿಲ್ಕ್ ಪ್ರಾಡಕ್ಟ್ಸ್, ಬೆಂಗಳೂರು
3. ಕಹಾಮ ಪಶು ಆಹಾರ ಘಟಕಗಳು, ರಾಜಾನುಕುಂಟೆ, ಗುಬ್ಬಿ, ಧಾರವಾಡ ಮತ್ತು ಹಾಸನ
4. ಕಹಾಮ ತರಬೇತಿ ಕೇಂದ್ರಗಳು, ಬೆಂಗಳೂರು, ಮೈಸೂರು ಮತ್ತು ಧಾರವಾಡ
5. ನಂದಿನಿ ವೀರ್ಯಾಣು ಕೇಂದ್ರ, ಹೆಸರಘಟ್ಟ
6. ಪೌಚ್ ಫಿಲಂ ಕಾರ್ಖಾನೆ, ಮುನ್ನೇಕೋಳಾಲ
7. ಹಾಲು ಉತ್ಪನ್ನಗಳ ಘಟಕ, ಚನ್ನರಾಯಪಟ್ಟಣ

ಭೌತಿಕ ಪ್ರಗತಿ:

ಇಂದು ರಾಜ್ಯದ 30 ಜಿಲ್ಲೆಗಳ ವ್ಯಾಪ್ತಿಯಲ್ಲಿ 13 ಹಾಲು ಒಕ್ಕೂಟಗಳ ಮೂಲಕ 176 ತಾಲ್ಲೂಕುಗಳಲ್ಲಿ ಸುಮಾರು 20497 ಹಳ್ಳಿಗಳು ಒಳಗೊಂಡಂತೆ 11831 ಪ್ರಾಥಮಿಕ ಹಾಲು ಸಹಕಾರ ಸಂಘಗಳನ್ನು ನೋಂದಾಯಿಸಿ ಈಗ (ಡಿಸೆಂಬರ್ 2009) ರಲ್ಲಿ 10238 ಹಾಲು ಸಂಘಗಳು ಕಾರ್ಯ ನಿರ್ವಹಿಸುತ್ತಿದ್ದು, ಇವುಗಳಲ್ಲಿ ಶೇ.96% ಸಂಘಗಳು ಲಾಭದಲ್ಲಿವೆ. ಡಿಸೆಂಬರ್ 2009 ರ ಅಂತ್ಯಕ್ಕೆ ಸುಮಾರು 20.56 ಲಕ್ಷ ಗ್ರಾಮೀಣ ರೈತರು ಈ ಸಂಘಗಳ ಸದಸ್ಯರಾಗಿದ್ದು ಇವರಲ್ಲಿ 6.60 ಲಕ್ಷ ಮಹಿಳಾ ಸದಸ್ಯರು, 7.66 ಲಕ್ಷ ಸಣ್ಣ ರೈತರು, 5.90 ಲಕ್ಷ ಅತಿ ಸಣ್ಣ ರೈತರು, 3.67 ಲಕ್ಷ ಭೂರಹಿತ ಕಾರ್ಮಿಕರು ಹಾಗೂ 3.32 ಲಕ್ಷ ಇತರರು ಸದಸ್ಯರಾಗಿದ್ದು, ಈ ಒಟ್ಟು ಸದಸ್ಯತ್ವದಲ್ಲಿ 2.77 ಲಕ್ಷ ಪರಿಶಿಷ್ಠ ಜಾತಿ ಮತ್ತು 1.16 ಲಕ್ಷ ಪರಿಶಿಷ್ಟ ಪಂಗಡದವರಿದ್ದಾರೆ.

ಹಾಲಿನ ಶೇಖರಣೆ:

ವರ್ಷವಿಡೀ ದಿನಕ್ಕೆ ಎರಡು ಬಾರಿ ಪ್ರಾಥಮಿಕ ಸಂಘಗಳಲ್ಲಿ ಹಾಲು ಶೇಖರಣೆ ಮಾಡುತ್ತಿದ್ದು ಪ್ರಸಕ್ತ ದಿನನಿತ್ಯ ಸರಾಸರಿ 36.24 ಲಕ್ಷ ಕೆ.ಜಿ ಹಾಲನ್ನು ಶೇಖರಣೆ ಮಾಡಲಾಗುತ್ತಿದೆ. 2009-10 ರ ಮಾಹೆಯಲ್ಲಿ ಗರಿಷ್ಠ 40.41 ಲಕ್ಷ ಕೆ.ಜಿ. ಶೇಖರಣೆಯಿದ್ದು ಯಾವುದೇ ರಜೆಯನ್ನು ಘೋಷಿಸದೆ ಸಂಸ್ಕರಣೆ ಮಾರಾಟ ಮತ್ತು ಪರಿವರ್ತನೆಯನ್ನು ನಿರ್ವಹಿಸಲಾಗುತ್ತಿದೆ. ಕರ್ನಾಟಕ ಹಾಲು ಮಹಾಮಂಡಳಿಯು ಸಹಕಾರಿ ಹೈನು ಉದ್ಯಮದಲ್ಲಿ ರಾಷ್ಟ್ರ ಮಟ್ಟದಲ್ಲಿ ಎರಡನೇ ಸ್ಥಾನದಲ್ಲಿ ಮತ್ತು ದಕ್ಷಿಣ ರಾಜ್ಯಗಳಲ್ಲಿ ಪ್ರಥಮ ಸ್ಥಾನದಲ್ಲಿರುತ್ತದೆ.

ಮಹಾಮಂಡಳಿಯ ವ್ಯಾಪ್ತಿಯಲ್ಲಿ ದಿನನಿತ್ಯ 32.25 ಲಕ್ಷ ಲೀಟರ್ ಹಾಲು ಸಂಸ್ಕರಿಸುವ ಸಾಮರ್ಥ್ಯದ 22 ಡೈರಿಗಳು, 15.15 ಲಕ್ಷ ಲೀ. ಹಾಲು ಶೀಥಲೀಕರಿಸುವ 44 ಶಿಥಲೀಕರಣ ಕೇಂದ್ರಗಳು ಹಾಗೂ ದಿನನಿತ್ಯ 92 ಟನ್ ಹಾಲುಪುಡಿ ತಯಾರಿಸುವ ಐದು ಹಾಲು ಉತ್ಪನ್ನ ಘಟಕಗಳು ಕಾರ್ಯ ನಿರತವಾಗಿವೆ.

ದಿನನಿತ್ಯ ಸರಾಸರಿ 24.80 ಲಕ್ಷ ಲೀಟರು ಹಾಲು ಮಾರಾಟವಾಗುತ್ತಿದ್ದು, ಇದರಲ್ಲಿ ಬೆಂಗಳೂರು ನಗರದಲ್ಲಿ ದಿನನಿತ್ಯ ಸರಾಸರಿ 13.06 ಲಕ್ಷ ಲೀಟರು ಹಾಲು ಮಾರಾಟವಾಗುತ್ತಿದೆ.

ಗ್ರಾಹಕರ ಬೇಡಿಕೆಯನ್ನು ಪೂರೈಸಲು ಇತರ ಹಾಲು ಉತ್ಪನ್ನಗಳಾದ ಗುಡ್‌ಲೈಫ್ UHT ಹಾಲು, ಮೊಸರು, ಬೆಣ್ಣೆ, ತುಪ್ಪ, ಎಸ್.ಎಂ.ಪಿ., ಸುವಾಸಿತ ಹಾಲು (8 ಸ್ವಾದಗಳಲ್ಲಿ), ಮೈಸೂರು ಪಾಕ್, ನಂದಿನಿ ಪ್ರೀಮಿಯಂ ಬರ್ಫಿ, ಪೇಡಾ, ಕೋವಾ, ಪನೀರ್, ಗೋಡಂಬಿ ಬರ್ಫಿ, ರಸಗುಲ್ಲಾ, ಬಾದಾಂ ಪೌಡರ್, ಜಾಮೂನ್ ಮಿಕ್ಸ್, ಜಾಮೂನ್ ಕಂಟೇನರ್ (Ready to Eat) ನಂದಿನಿ ಬೈಟ್, ಯೋಗರ್ಟ್ ಮತ್ತು ಬೇಸನ್ ಲಡ್ಡು ಉತ್ಪನ್ನಗಳನ್ನು ತಯಾರಿಸಿ, ಮಾರಾಟ ಮಾಡಲಾಗುತ್ತಿದ್ದು, ಇದಲ್ಲದೆ ಸಿಹಿ ಮೊಸರು, ಕುಡಿಕೆ ಮೊಸರು, ಮಸಾಲೆ ಮಜ್ಜಿಗೆ, ಐಸ್ ಕ್ರೀಂ, ಕುಂದ ಉತ್ಪನ್ನಗಳನ್ನು ಸಹ ತಯಾರಿಸಿ, ನಂದಿನಿ ಬ್ರಾಂಡ್ ಹೆಸರಿನಲ್ಲಿ ಮಾರಾಟ ಮಾಡಲಾಗುತ್ತಿದೆ. ಇದರ ಜೊತೆಗೆ ನೂತನ ತಾಂತ್ರಿಕತೆಯನ್ನಳವಡಿಸಿ, ವಿವಿಧ ಸ್ವಾದದ ಸುವಾಸಿತ ಹಾಲು ಮತ್ತು ಮಜ್ಜಿಗೆಯನ್ನು ಆಕರ್ಷಕ ಟೆಟ್ರಾಬ್ರಿಕ್ ಪ್ಯಾಕ್‌ನಲ್ಲಿ ಬಿಡುಗಡೆ ಮಾಡಲಾಗಿದೆ.

**ಸಾಧನೆಯ ಮೈಲಿಗಲ್ಲುಗಳು ಮತ್ತು ಮುಂದಿನ ಕಾರ್ಯಕ್ರಮಗಳು:**

- ರಾಜ್ಯದ ಎಲ್ಲಾ ಪ್ರದೇಶಗಳನ್ನು ಸಂಪೂರ್ಣ ಹೈನುಗಾರಿಕೆ ಅಭಿವೃದ್ಧಿಯಡಿಯಲ್ಲಿ ತಂದಿದೆ.
- ಎಲ್ಲಾ ಜಿಲ್ಲಾ ಹಾಲು ಒಕ್ಕೂಟಗಳು ಮತ್ತು ಮಹಾಮಂಡಳಿಯಲ್ಲಿ ಚುನಾಯಿತ ಮಂಡಳಿಗಳ ಕಾರ್ಯನಿರ್ವಹಣೆ.
- ಶೇಖರಣೆ ಮತ್ತು ಮಾರಾಟ ಬೆಲೆಗಳ ನಡುವೆ ಕಡಿಮೆ ಬೆಲೆ ಅಂತರದಿಂದಾಗಿ (Low Price Spread) ಹಾಲು ಉತ್ಪಾದಕರಿಗೆ ಅಧಿಕ ದರದ ಹಣ ಪಾವತಿ.
- ಶೇ. 96 ಹಾಲು ಉತ್ಪಾದಕರ ಸಹಕಾರಿ ಸಂಘಗಳ ಲಾಭದಲ್ಲಿವೆ.
- ಪ್ರಸ್ತುತದಲ್ಲಿ ಹಾಲು ಉತ್ಪಾದಕರಿಗೆ ದಿನವೊಂದಕ್ಕೆ ಸರಾಸರಿ ರೂ.462 ಲಕ್ಷಗಳ ಸಂದಾಯ ಮಾಡಲಾಗುತ್ತಿದೆ.
- ಹೆಚ್ಚಿನ ಸಂಖ್ಯೆಯಲ್ಲಿ ಹಾಲು ಉತ್ಪಾದಕರನ್ನು "ಯಶಸ್ವಿನ" ವಿಮಾ ಯೋಜನೆ ಅಡಿಯಲ್ಲಿ ನೊಂದಾಯಿಸುವುದರ ಮೂಲಕ ಕ್ರಿಯಾತ್ಮಕವಾಗಿ ಭಾಗವಹಿಸುತ್ತಿದೆ.
- ಗುಣಮಟ್ಟದ ಉತ್ಪಾದನೆಗೆ ಹೆಚ್ಚು ಒತ್ತು ನೀಡಿದ್ದರ ಫಲವಾಗಿ ಕಹಾಮದ ನಾಲ್ಕು ಪಶು ಆಹಾರ ಘಟಕಗಳಿಗೆ ISO-9001:2000 Indian Registered Quality Systems ದೃಢೀಕರಣದೊಂದಿಗೆ ಪ್ರಮಾಣ ಪತ್ರ ಲಭಿಸಿದೆ.
- ಗುಣಮಟ್ಟದ ವೀರ್ಯ ನಳಿಕೆಗಳ ಉತ್ಪಾದನೆಗಾಗಿ ನಂದಿನಿವೀರ್ಯಾಣು ಕೇಂದ್ರಕ್ಕೆ ISO-9001:2000 ಪ್ರಮಾಣ ಪತ್ರ ಲಭಿಸಿದ್ದು, ಭಾರತ ಸರ್ಕಾರದ ಕೃಷಿ ಸಚಿವಾಲಯವು 2005-06 ರಲ್ಲಿ ರಾಷ್ಟ್ರದ 2 ನೇ ಅತ್ಯುತ್ತಮ ಘನೀಕೃತ ವೀರ್ಯಾಣು ಕೇಂದ್ರವೆಂದು ಗುರುತಿಸಿ ಪ್ರಶಸ್ತಿ ನೀಡಿದೆ.
- ಹಾಲು ಮಹಾಮಂಡಳಿಯ ಕೆನೆ ರಹಿತ ಹಾಲಿನ ಪುಡಿಯನ್ನು ನವೆಂಬರ್-2000 ರಿಂದ ರಫ್ತು ಮಾಡಲು ಪ್ರಾರಂಭಿಸಿದ್ದು, ನೇಪಾಳ, ಬಾಂಗ್ಲಾದೇಶ, ಓಮೆನ್, ಮಡಗಾಸ್ಕರ್, ಬರ್ಮಾ, ಸಿಂಗಾಪುರ, ಥೈಲ್ಯಾಂಡ್ ಹಾಗೂ ಫಿಲಿಪೈನ್ಸ್ ದೇಶಗಳಿಗೆ 2000-2009 ರ ಅವಧಿಯಲ್ಲಿ ಸುಮಾರು 10,023 ಮೆ.ಟನ್. ಕೆನೆ ರಹಿತ ಹಾಲಿನ ಪುಡಿಯನ್ನು ರಫ್ತು ಮಾಡಲಾಗಿದೆ.
- ಕೆನೆ ರಹಿತ ಹಾಲಿನ ಪುಡಿಯನ್ನು ರಫ್ತು ಮಾಡುವುದಕ್ಕಾಗಿ ಬೆಂಗಳೂರಿನ ಮಾತೃ ಡೇರಿಯು Exports Instruction Agency, ವಾಣಿಜ್ಯ ಸಚಿವಾಲಯ, ಭಾರತ ಸರ್ಕಾರ ಇವರಿಂದ ಪರವಾನಗಿಯನ್ನು ಪಡೆದುಕೊಂಡಿದೆ.

- ಬೆಂಗಳೂರು ಹಾಲು ಒಕ್ಕೂಟವು ISO-2000:2005 ರ ಪ್ರಮಾಣ ಪತ್ರ ಪಡೆದ ದಕ್ಷಿಣ ಭಾರತದ ಪ್ರಥಮ ಡೇರಿಯಾಗಿದ ಇತ್ತೀಚೆಗೆ ಮದರ್ ಡೇರಿಗೂ ಸಹಾ ಈ ಪ್ರಮಾಣ ಪತ್ರ ಲಭಿಸಿದೆ.
- ರಾಷ್ಟ್ರೀಯ ಪಶು ಆಹಾರ ಹಾಗೂ ಜೈವಿಕ ವಿಜ್ಞಾನ ಸಂಸ್ಥೆ (NIANP) ಬೆಂಗಳೂರು ರವರ ಸಹಯೋಗದೊಂದಿ ಪ್ರದೇಶಕ್ಕನುಗುಣವಾಗದ (Area Specific) ಮಿನರಲ್ ಮಿಕ್ಸಚರ್‌ನ್ನು ಗುಬ್ಬಿ ಪಶು ಆಹಾರ ಘಟಕದಲ್ಲಿ ಪ್ರಾರಂಭಿಸಲಾಗಿದ
- ಕರ್ನಾಟಕ ಹಾಲು ಮಹಾಮಂಡಳಿಯು, ಕೇಂದ್ರ ಸರ್ಕಾರದ ಯೋಜನೆಗಳಾದ ಶುದ್ಧ ಹಾಲು ಉತ್ಪಾದನೆ ಯೋಜನೆ ಆತ್ಮಹತ್ಯೆ ಪ್ರೇರಿತ ಜಿಲ್ಲೆಗಳಿಗೆ ರೂಪಿಸಲಾದ ವಿಶೇಷ ಪ್ಯಾಕೇಜ್ ಮೇವು ಅಭಿವೃದ್ಧಿ ಮುಂತಾದ ಯೋಜನೆಗಳನ್ನು ಹಾಗೂ ರಾಜ್ಯ ಸರ್ಕಾರದ ಅಮೃತ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಿದೆ.
- ರಾಜ್ಯದ ಹೈನುಗಾರರ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ 600 ಗಂಡುಮಕ್ಕಳ ಹಾಗೂ 400 ಹೆಣ್ಣುಮಕ್ಕಳಿ ರೂ.12.96 ಕೋಟಿ ವೆಚ್ಚದಲ್ಲಿ ನಂದಿನಿಹೈನುಗಾರಿಕೆ ರೈತರ ಕಲ್ಯಾಣ ಟ್ರಸ್ಟ್‌ವತಿಯಿಂದ ಹಾಸ್ಟೆಲ್ ಸ್ಥಾಪನೆ ಮಾಡಲಾಗಿದ

<u>ಮುಂದಿನ ಕಾರ್ಯಕ್ರಮಗಳು:</u>

- ಹಾಸನದಲ್ಲಿ 300 ಮೆ.ಟನ್ ಸಾಮರ್ಥ್ಯದ ಅತಿ ನೂತನ ಪಶು ಆಹಾರ ಘಟಕ ರೂ.39 ಕೋಟಿ ವೆಚ್ಚದಲ್ಲಿ ಸ್ಥಾಪನೆ
- ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚಳ್ಳಘಟ್ಟ ಬಳಿ ಅಂದಾಜು ವೆಚ್ಚ ರೂ.61.00 ಕೋಟಿಯಲ್ಲಿ 500 ಮೆ.ಟನ್ ಸಾಮರ್ಥ್ಯ ನೂತನ ಪಶು ಆಹಾರ ಘಟಕ ಸ್ಥಾಪನೆಗೆ NDDB ಯಿಂದ ಅನುಮೋದನೆ ದೊರೆತಿದ್ದು, ಮುಂದಿನ ಕ್ರಮಕೈಗೊಳ್ಳಲಾಗುವುದ – (ರಾಷ್ಟ್ರೀಯ ಹೈನು ಅಭಿವೃದ್ಧಿ ನಿಗಮದಿಂದ ಆರ್ಥಿಕ ನೆರವು).
- ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ ರೂಪಿಸಿರುವ National Dairy Plan ನಲ್ಲಿ ವೀರ್ಯಾಣು ಕೇಂದ್ರವನ್ನು ಇನ್ನಷ್ಟು ಬಲಪಡಿಸಲು ಹಾಗೂ ತಳಿ ಅಭಿವೃದ್ಧಿಗೆ ದೇಶಕ್ಕೆ ಬೇಕಾಗುವ HF ತಳಿಯ ಹೋರಿ ಕರುಗಳನ್ನು ಪ್ರಾಜಿನಿ ಟೆಸ್ಟಿಂಗ್ ಸ್ಕೀಮ ಮೂಲಕ ಆಯ್ಕೆ ಮಾಡಲು NDDB – KMF ಸಹಯೋಗದಲ್ಲಿ ಯೋಜನೆ ಪ್ರಾರಂಭಿಸಲಾಗಿದೆ – (ರಾಷ್ಟ್ರೀಯ ಹೈನು ಅಭಿವೃದ್ಧಿ ನಿಗಮದಿಂದ ಅನುದಾನ)
- ಡಾ|| ಡಿ.ಎಂ.ನಂಜುಂಡಪ್ಪ ವರದಿ ಅನ್ವಯ ಪ್ರಾದೇಶಿಕ ಅಸಮತೋಲನ ನಿವಾರಣೆ ಯೋಜನೆ ಅಡಿಯಲ್ಲಿ 2009-10 ನೆ ಸಾಲಿನ ಕರ್ನಾಟಕ ಸರ್ಕಾರದ ಆಯವ್ಯಯದಲ್ಲಿ ಮಂಜೂರಾಗಿರುವ 400 ಲಕ್ಷಗಳ ಅನುದಾನದಲ್ಲಿ ಗುಲ್ಬರ್ಗಾ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಹಿಂದುಳಿದ ಅತೀ ಹಿಂದುಳಿದ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಹೈನು ಅಭಿವೃದ್ಧಿ ಮೂಲಭೂತ ಸೌಕರ್ಯ ಕಲ್ಪಿಸಲು ಉದ್ದೇಶಿಸಲಾಗಿದೆ.
- ಕರ್ನಾಟಕ ಸರ್ಕಾರದ ಆಯವ್ಯಯದಲ್ಲಿ ಉತ್ತರ ಕರ್ನಾಟಕದ ಭಾಗದಲ್ಲಿ ಹಾಲು ಶೀಥಲೀಕರಣ ಘಟಕಗಳ ಸ್ಥಾಪನೆ ರೂ.5.00 ಕೋಟಿ ಮಂಜೂರಾಗಿದ್ದು, ಈ ಭಾಗದಲ್ಲಿ ಶೀಥಲೀಕರಣ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದ
- ಹೆಚ್ಚಿನ ಹಾಲು ಉತ್ಪಾದನೆ ಇರುವ ತಳಿಗಳ ವೀರ್ಯನಳಿಕೆ, ಭ್ರೂಣ ಹಾಗೂ ಹೋರಿ ಕರುಗಳನ್ನು ಆಮದು ಮಾಡಿಕೊಳ್ಳಲು ಉದ್ದೇಶಿಸಲಾಗಿದೆ.
- ಕೇಂದ್ರ ಸರ್ಕಾರದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ಗುಲ್ಬರ್ಗಾ, ಬಳ್ಳಾರಿ ಹಾಗೂ ಬಿಜಾಪುರ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಹಾಲಿನ ಮಾರಾಟ ಹೆಚ್ಚಿಸಲು ಅನುಕೂಲವಾಗುವಂತೆ ಕೋಲ್ಡ್ ಸ್ಟೋರೇಜ್ ಅನ್ನು ನಿರ್ಮಿಸಲು ಡೀಪ್ರಿಜರ್ ಅನ್ನು ಸ್ಥಾಪಿಸಲು ಹಾಗೂ ಪಾರ್ಲರ್‌ಗಳನ್ನು ರೂ.300 ಲಕ್ಷ ಅನುದಾನದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ.
- ಶಿವಮೊಗ್ಗ ಜಿಲ್ಲಾ ವ್ಯಾಪ್ತಿಯಲ್ಲಿ ಪ್ರತಿ ದಿನ 150 ಮೆ.ಟನ್ ಸಾಮರ್ಥ್ಯದ ಪಶು ಆಹಾರ ಘಟಕ ಸ್ಥಾಪನೆಗಾಗಿ ಕರ್ನಾಟಕ ಸರ್ಕಾರಕ್ಕೆ ಅನುದಾನ ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

## ಬಿ. ಹಾಲು ಮತ್ತು ಹಾಲಿನ ಉತ್ಪನ್ನಗಳ ಕುರಿತು ಆದೇಶ

ಕೇಂದ್ರ ಸರ್ಕಾರದ ಹಾಲು ಮತ್ತು ಹಾಲು ಉತ್ಪನ್ನಗಳ ಆಜ್ಞೆ-92 ಕಾಯ್ದೆಯ ಪ್ರಕಾರ ಪ್ರತಿ ದಿನ 10,000 ಲೀಟರಿಗಿ ಹೆಚ್ಚು ಹಾಲನ್ನು ಸಂಗ್ರಹಿಸುವ ಮತ್ತು ಸಂಸ್ಕರಿಸುವ ಡೈರಿ ಘಟಕಗಳಿಗೆ ರಾಜ್ಯ ನೋಂದಣಿ ಪ್ರಾಧಿಕಾರ ಅಥವಾ ಕೇಂದ್ರ ನೋಂದ ಪ್ರಾಧಿಕಾರದಿಂದ ಪರವಾನಗಿ ಪಡೆಯಬೇಕಾಗಿದೆ. ಪ್ರಥಮವಾಗಿ ರಾಜ್ಯ ನೋಂದಣಿ ಪ್ರಾಧಿಕಾರವು 75,000 ಲೀಟರ್‌ರವ ಪ್ರತಿ ದಿನ ಹಾಲನ್ನು ಸಂಗ್ರಹಿಸುವ ಮತ್ತು ಸಂಸ್ಕರಿಸುವ ಡೈರಿ ಘಟಕಗಳಿಗೆ ಅಥವಾ 500 ಮೆಟ್ರಿಕ್‌ಟನ್ ಪ್ರತಿ ವರ್ಷ ಹಾ ಉತ್ಪನ್ನಗಳನ್ನು ಮಾರಾಟ ಮಾಡುವ ಡೈರಿ ಘಟಕಗಳಿಗೆ ಪರವಾನಗಿ ನೀಡಲಾಗಿದೆ. ನಂತರ ಮಾರ್ಪಾಡಾದ ಅಧಿಸೂಚನೆ ಪ್ರ ರಾಜ್ಯ ನೋಂದಣಿ ಪ್ರಾಧಿಕಾರಕ್ಕೆ ಪ್ರತಿ ದಿನ 75,000 ಲೀಟರ್ ಹಾಲಿನಿಂದ 1.00 ಲಕ್ಷ ಲೀಟರ್‌ವರೆಗೆ, ನಂತರ ಇದು 2.0 ಲಕ್ಷವರೆಗೆ ಹೆಚ್ಚಿಸಿ ಪರವಾನಗಿ ನೀಡುವ ಅಧಿಕಾರ ನೀಡಲಾಯಿತು. ಹಾಲು ಮತ್ತು ಹಾಲು ಉತ್ಪನ್ನಗಳು ಒಂದು ರಾಜ್ಯದಿ ಮತ್ತೊಂದು ರಾಜ್ಯಕ್ಕೆ ಹೋಗದಂತೆ ದಿನಾಂಕ:1-4-2002 ರಿಂದ ತಡೆಯುವ ಯಾವುದೇ ಅಧಿಕಾರವಿರುವುದಿಲ್ಲ. ಇದುವರೆ ಕೇಂದ್ರ ನೋಂದಣಿ ಪ್ರಾಧಿಕಾರದಿಂದ 16 ಡೈರಿ ಘಟಕಗಳಿಗೆ ಹಾಗೂ ರಾಜ್ಯ ನೋಂದಣಿ ಪ್ರಾಧಿಕಾರದಿಂದ 25 ಡೈರಿ ಘಟಕಗಳ ಪರವಾನಗಿ ನೀಡಲಾಗಿದೆ.



ಹೆಚ್.ಎಫ್. ಕ್ರಾಸ್ ಹಸು



ಸುರ್ತಿ ಎಮ್ಮೆ

## 6. ವರಾಹ ಅಭಿವೃದ್ಧಿ

ರಾಜ್ಯದಲ್ಲಿ ಒಟ್ಟು 4 ಹಂದಿ ಸಂವರ್ಧನಾ ಕ್ಷೇತ್ರಗಳಿದ್ದು, ಅವುಗಳು ಬೆಂಗಳೂರು ಜಿಲ್ಲೆಯ ಹೆಸರಘಟ್ಟ, ಕೊಡಗು ಜಿಲ್ಲೆಯ ಕೂಡಿಗೆ, ದಕ್ಷಿಣ ಕನ್ನಡ ಜಿಲ್ಲೆಯ ಕೊಯ್ಲಾ ಮತ್ತು ಕೋಲಾರ ಜಿಲ್ಲೆ0ಯ ಬಂಗಾರಪೇಟೆಗಳಲ್ಲಿವೆ. ಈ ಕೇಂದ್ರಗಳ ಉದ್ದೇಶಗಳು ಕೆಳಕಂಡಂತಿವೆ.

- ಸುಧಾರಿತ ವಿದೇಶಿ ತಳಿಯ ಹಂದಿಗಳನ್ನು ಸಂವರ್ಧಿಸಿ ಮರಿಗಳನ್ನು ಉತ್ಪಾದಿಸಿ ರೈತರಿಗೆ ಮತ್ತು ವಿವಿಧ ಸಾಮಾಜಿಕ ಆರ್ಥಿಕ ಕಾರ್ಯಕ್ರಮಗಳ ಫಲಾನುಭವಿಗಳಿಗೆ ಸಾಕಾಣಿಕೆಗಾಗಿ ವಿತರಣೆ ಮಾಡುವುದು.
- ರೈತರಿಗೆ ಹಾಗು ವಿವಿಧ ಸಾಮಾಜಿಕ ಆರ್ಥಿಕ ಕಾರ್ಯಕ್ರಮಗಳಿಗೆ, ಫಲಾನುಭವಿಗಳಿಗೆ, ಆಧುನಿಕ ಮತ್ತು ವೈಜ್ಞಾನಿಕ ಹಂದಿ ಸಾಕಾಣಿಕೆಯಲ್ಲಿ ತರಬೇತಿ ನೀಡುವುದು.
- ಆಧುನಿಕ ಹಂದಿ ಸಾಕಾಣಿಕೆಯಲ್ಲಿ ತೊಡಗಬೇಕೆಂದಿರುವ ರೈತರಿಗೆ ಸಾಲ ಪಡೆಯಲು ನೆರವು ನೀಡುವುದು ಮತ್ತು ಅಂತಹ ಯೋಜನೆಗಳ ವರದಿಗಳನ್ನು ತಯಾರಿಸುವುದು.
- ಹಂದಿ ಸಂವರ್ಧನಾ ಕ್ಷೇತ್ರಗಳ ಸುತ್ತಮುತ್ತಲಿರುವ ರೈತರಿಗೆ ವಿಸ್ತರಣಾ ಕಾರ್ಯಗಳ ಸೌಲಭ್ಯಗಳನ್ನು ಒದಗಿಸುವುದು.
- ಹಂದಿ ಮಾಂಸದ ಪೌಷ್ಠಿಕತೆಯನ್ನು ಜನರಿಗೆ ತಿಳಿಯಪಡಿಸುವುದು ಮತ್ತು ಉತ್ತಮ ಗುಣಮಟ್ಟದ ಹಂದಿ ಮಾಂಸದ ಮಾರಾಟಕ್ಕೆ ವ್ಯವಸ್ಥೆ ಮಾಡುವುದು.
- ಹಂದಿ ಸಾಕಾಣಿಕೆದಾರರಿಗೆ ಸೂಕ್ತ ಮಾರುಕಟ್ಟೆ ದೊರಕಿಸಲು ಸಹಾಯ ಮಾಡುವುದು.

ಸಾಧನೆಗಳು :-

ರಾಜ್ಯದಲ್ಲಿ ಈಗ ವೈಜ್ಞಾನಿಕ ರೀತಿಯಲ್ಲಿ ಆಧುನಿಕ ಹಂದಿ ಸಾಕಾಣಿಕೆಯನ್ನು ಕೈಗೊಳ್ಳಲು ಹೆಚ್ಚಿನ ಸಂಖ್ಯೆಯಲ್ಲಿ ರೈತರು ಮತ್ತು ವಿದ್ಯಾವಂತ ನಿರುದ್ಯೋಗಿಗಳು ಮುಂದೆ ಬರುತ್ತಿರುವರು. 524 ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಸಣ್ಣ, ಮಧ್ಯಮ ಮತ್ತು ದೊಡ್ಡ ಗಾತ್ರದ ಆಧುನಿಕ ಹಂದಿ ಸಾಕಾಣಿಕೆ ಘಟಕಗಳು ಬ್ಯಾಂಕ್ ಸಾಲಗಳ ಸಹಾಯದಿಂದ ಸ್ಥಾಪಿತಗೊಂಡಿವೆ. ಇದರಿಂದಾಗಿ ಉತ್ತಮ ಗುಣಮಟ್ಟದ ಹಂದಿ ಮಾಂಸದ ಉತ್ಪತ್ತಿಯ ಜೊತೆಗೆ ಹಂದಿ ಸಾಕಾಣಿಕೆದಾರರ ಜೀವನ ಮಟ್ಟವು ಸುಧಾರಿಸುತ್ತಿರುವುದು.

ಮಾಂಸದ ಉತ್ಪಾದಕರ ಅಭಿವೃದ್ಧಿಗಾಗಿ, ರಾಜ್ಯಮಟ್ಟದಲ್ಲಿ ಹಂದಿ ಸಾಕಾಣಿಕೆದಾರರ ಸಹಕಾರ ಸಂಘವನ್ನು ಸ್ಥಾಪಿಸಲಾಗಿದೆ. ಈ ಕಾರ್ಯಕ್ರಮದಡಿಯಲ್ಲಿ ದಿನಾಂಕ:1-4-2009 ರಿಂದ 31-12-2009 ಅಂತ್ಯದವರೆಗೆ ಸಾಧಿಸಿದ ಪ್ರಗತಿಯನ್ನು ಕೆಳಗಿನ ಪಟ್ಟಿ-26 ರಲ್ಲಿ ತೋರಿಸಿದೆ.

## ಪಟ್ಟಿ-26

ವರಾಹಾಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ 1-4-2009 ರಿಂದ 31-12-2009 ಅಂತ್ಯದವರೆಗೆ ಸಾಧಿಸಿದ ಪ್ರಗತಿ

| ಕ್ರ. ಸಂ. | ಹಂದಿ ಸಂವರ್ಧನಾ ಕೇಂದ್ರ | ಹಂದಿ ಮರಿಗಳ ವಿತರಣೆ | | | ತರಬೇತಿ ಪಡೆದ ರೈತರು | |
|---|---|---|---|---|---|---|
| | | ವಾರ್ಷಿಕ ಗುರಿ | ಸಾಧನೆ | ಸರಾಸರಿ | ಗುರಿ | ಸಾಧನೆ |
| 1 | ಹೆಸರಘಟ್ಟ | 125 | 73 | 81.11 | 125 | 100 |
| 2 | ಕೂಡಿಗೆ | 125 | 71 | 88.75 | 300 | 219 |
| 3 | ಕೊಯ್ಲಾ | 125 | 81 | 90.00 | 120 | 114 |
| 4 | ಬಂಗಾರಪೇಟೆ | 50 | 12 | 33.33 | - | - |



ಯಾರ್ಕ್ ಶೈರ್ ಹಂದಿ



ಯಾರ್ಕ್ ಶೈರ್ ಗೂಳಿ ಹಂದಿ

# 7. ಮೊಲ ಸಾಕಾಣಿಕೆ ಅಭಿವೃದ್ಧಿ

ಮಾಂಸದ ಉತ್ಪಾದನೆಗಾಗಿ, ಮೊಲಗಳ ಸಾಕಾಣಿಕೆಯನ್ನು ಪ್ರಚಾರಪಡಿಸುವ ಉದ್ದೇಶದಿಂದ ಹೆಸರಘಟ್ಟ, ಸಿರ್ಸಿ, ಬಂಗಾರಪೇಟೆ, ಕೂಡಿಗೆ ಮತ್ತು ಬಂಕಾಪುರದಲ್ಲಿ 5 ಮೊಲ ಸಾಕಾಣಿಕೆ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಈ ಕೇಂದ್ರಗಳಲ್ಲಿ ನ್ಯೂಜಿಲ್ಯಾಂಡ್ ವೈಟ್, ಕ್ಯಾಲಿಫೋರ್ನಿಯಾ ವೈಟ್, ಗ್ರೇಜಯಂಟ್ ಮತ್ತು ಚಿಂಚಿಲ್ಲಾ ತಳಿಗಳನ್ನು ಸಾಕಲಾಗುತ್ತಿದೆ. ಮೊಲದ ಮರಿಗಳನ್ನು ತಳಿ ಅಭಿವೃದ್ಧಿಗೆ ರೈತರಿಗೆ ನಿಗದಿತ ದರದಲ್ಲಿ ಮಾರಾಟ ಮಾಡಲಾಗುತ್ತಿದೆ.

ಈ ಕೇಂದ್ರಗಳು ಪ್ರಸಕ್ತ ಸಾಲಿನಲ್ಲಿ 31-12-2009 (2009-10) ರವರೆಗೆ ನಡೆಸಲಾದ ಚಟುವಟಿಕೆಗಳ ವಿವರವನ್ನು ಪಟ್ಟಿ-27 ರಲ್ಲಿ ನೀಡಿದೆ.

**ಪಟ್ಟಿ-27**

**ದಿನಾಂಕ: 1-4-2009 ರಿಂದ 31-12-2009 ರವರೆಗಿನ ಪ್ರಗತಿಯ ವಿವರ**

| ಕ್ರ. ಸಂ. | ಕೇಂದ್ರ | ನಿರ್ವಹಿಸಲಾಗುತ್ತಿರುವ ಮೊಲಗಳ ಸಂಖ್ಯೆ | ಉತ್ಪಾದನೆ ಮಾಡಿದ ಮೊಲಗಳ ಸಂಖ್ಯೆ | ಮಾರಾಟ ಮಾಡಿದ ಮೊಲಗಳ ಸಂಖ್ಯೆ | ತರಬೇತಿ ನೀಡಲಾದ ರೈತರುಗಳ ಸಂಖ್ಯೆ |
|---|---|---|---|---|---|
| 1 | ಹೆಸರಘಟ್ಟ | 12 | - | - | 327 |
| 2 | ಸಿರ್ಸಿ | 69 | 15 | 38 | - |
| 3 | ಬಂಗಾರಪೇಟೆ | 29 | 34 | 53 | 30 |
| 4 | ಕೂಡಿಗೆ | 19 | - | - | - |
| 5 | ಬಂಕಾಪುರ | 76 | 167 | 197 | 278 |
| | ಒಟ್ಟು | **205** | **216** | **288** | **635** |



ನ್ಯೂಜಿಲ್ಯಾಂಡ್ ಬಿಳಿ ಮೊಲ



ರಷ್ಯನ್ ಜೈಂಟ್ ಮೊಲ